ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 30 RNI Number : KNKAN/25/A2770 03-02-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :30 ರಾಯಚೂರು 03-02-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಒಬ್ಬ ಮನುಷ್ಯ ಧೈರ್ಯವಾಗಿ ನಿಂತ್ರೆ ಅದೇ ಬಹುಮತ'-ಡಿಕೆಶಿ

ವಿಧಾನಸಭೆಯಲ್ಲಿ 'ಪವರ್ ಶೇರಿಂಗ್' ಬಗ್ಗೆ ಸ್ವಾರಸ್ಯಕರ ಚರ್ಚೆ



ಬೆಂಗಳೂರು: ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ನಡುವಿನ ನಾಯಕತ್ವ ಗುದ್ದಾಟದ ಬಗ್ಗೆ ಇಂದು ಸದನದಲ್ಲಿ ಸ್ವಾರಸ್ಯಕರ ಚರ್ಚೆ ನಡೆಯಿತು. ಡಿಸಿಎಂ ಡಿ.ಕೆ.ಶಿವಕುಮಾರ್ ಒಬ್ಬ ಮನುಷ್ಯ ಧೈರ್ಯವಾಗಿ ನಿಂತರೆ ಅದೇ ಬಹುಮತ ಎಂದು ಹೇಳಿರುವುದು ವಿಶೇಷವಾಗಿ ಗಮನ ಸೆಳೆಯಿತು.

ವಿಧಾನಸಭೆಯಲ್ಲಿ ಕಾಂಗ್ರೆಸ್ ಪವರ್ ಶೇರ್ ಬಗ್ಗೆ ಪ್ರಸ್ತಾಪಿಸುತ್ತಾ, ನನಗೂ, ಡಿಸಿಎಂಗೂ ಆಗಲ್ಲ ಅಂತ ಬಿಜೆಪಿಯವರು ಹೇಳ್ತಾರೆ ಎಂದು ಸಿಎಂ ಸಿದ್ದರಾಮಯ್ಯ ಡಿಕೆಶಿಯವರತ್ತ ನೋಡಿ ಹೇಳುತ್ತಾರೆ. ಡಿಕೆಶಿ ಕಡೆ ನೋಡಿದ ಸಿಎಂ, ನನಗೂ ಡಿಸಿಎಂಗೂ ಜಗಳ ಇದೆ ಅಂತಿದ್ದಾರೆ. ಹಾಲು ಅಂತ ನಿನಗೆ, ನನಗೆ ಸಕ್ಕರೆ ಅಂದಿದ್ದಾರೆ. ನಿನಗೂ ನನಗೂ ಹಾಲಾಹಲ ಇದೆ ಅಂತ ಹೇಳಿದ್ರು ಎಂದರು. ಇದಕ್ಕೆ ಕೂತಲ್ಲೇ ಪ್ರತಿಕ್ರಿಯಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್ ಸಮಯವೇ ಉತ್ತರ ಕೊಡುತ್ತದೆ ಬಿಡಿ ಎಂದರು.

ಆಗ ಆರ್.ಅಶೋಕ್ ಮಧ್ಯಪ್ರವೇಶಿಸಿ, ಕರೆಕ್ಟ್. ಒಂದು ಮಾತು ನೂರು ಅರ್ಥ. ಇದು ಡಿಕೆಶಿ ಸ್ಟೈಲ್. ಸಮಯ ಉತ್ತರ ಕೊಡುತ್ತದೆ ಅಂತ ಡಿಕೆಶಿ ಹೇಳಿದ್ದಾರೆ. ಆ ಸಮಯ ಯಾವಾಗ ಬರುತ್ತದೆ ಅಂತ ಹೇಳಲಿ ಎಂದು ಕೇಳಿದರು. ಈ ವೇಳೆ ಮಧ್ಯಪ್ರವೇಶಿಸಿದ ಸಚಿವ ಸಂತೋಷ್ ಲಾಡ್‌ಗೆ, ನೀನು ಯಾರ ಕಡೆ ಅಂತ ಟಕ್ಕರ್ ಕೊಟ್ಟರು. ಯಾರೋ ನನಗೆ ಹೇಳಿದ್ರು, ಡಿಕೆಶಿ ಕಡೆ 56 ಶಾಸಕರು ಇದ್ದಾರೆ ಅಂತೆ. ಆದ್ರೆ ಸಂತೋಷ್ ಲಾಡ್ ಅಂಥವರು ಬೆಳಗ್ಗೆ ಅಲ್ಲಿ ರಾತ್ರಿ ಇಲ್ಲಿ ಇರ್ತಾರೆ. ಅದಕ್ಕೆ ಡಿಕೆಶಿಗೆ ಲಾಡ್ ಅಂಥವರನ್ನು ನೋಡಿ ಯಾರು ಯಾರ ಕಡೆ ಇದ್ದಾರೆ ಅಂತ ಗೊಂದಲ ಆಗಿದೆಯಂತೆ ಎಂದು ಅಶೋಕ್ ಕಾಲೆಳೆದರು.

ಅಶೋಕ್ ಮಾತಿಗೆ ಸಿಟ್ಟಾದ ಸಂತೋಷ್ ಲಾಡ್, ನಿಮ್ಮ ಮೇಲೆ ನಮಗೆ ಗೌರವ ಇದೆ. ಆ ಥರ ಮಾತಾಡಬೇಡಿ. ಬೆಳಗ್ಗೆ ಹೋಗುವ, ಸಂಜೆ ಹೋಗುವ ಅಗತ್ಯ ನನಗೆ ಇಲ್ಲ. ನೀವು 56 ಶಾಸಕರನ್ನು ಖರೀದಿಸಲು ಹೋಗಿದ್ದವರು. ಅವರ ಕಾಲಿಗೆ ಬಿದ್ದು ಖರೀದಿ ಮಾಡಿಸಿದವರು. ನೀವು ಈ ತರದ ಮಾತು ಮಾತನಾಡಬಾರದು ಎಂದು ಮನವಿ ಮಾಡಿದರು.

ಆರ್.ಅಶೋಕ್ ಮಾತಿಗೆ ಸ್ಪಷ್ಟನೆ ನೀಡಿದ ಡಿ.ಕೆ.ಶಿವಕುಮಾರ್ ನಾನು ಸ್ಟೂಡೆಂಟ್ ಪಾಲಿಟಿಕ್ಸ್ ನಿಂದ ಬಂದವ. ಏಟು ತಿಂದಿದ್ದೇನೆ. ನೋವುಂಡಿದ್ದೇನೆ, ಬೆಳೆದಿದ್ದೇನೆ. ಸಿದ್ದರಾಮಯ್ಯ ಸೇರಿ ನನ್ನ ಬಲ 136 ಶಾಸಕರು. ಎಲ್ಲಾ ಬಿಕ್ಕಟ್ಟಿನಲ್ಲಿ ಅವರ ಜತೆ ನಾನು ನಿಂತಿದ್ದೇನೆ. ಅವರು ನನ್ನ ಜತೆ ನಿಲ್ಲುತ್ತಾರೆ. ನಾವಿಬ್ರೂ ಹೀಗೇ ಜೋಡಿಯಾಗಿ ಇರುತ್ತೇವೆ. ಪಕ್ಷ ತೀರ್ಮಾನ ಮಾಡುತ್ತದೆ. ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುವಾಗ ತೆಗೆದುಕೊಳ್ಳುತ್ತದೆ. ಅದು ಬೇರೆ. ನಾನು ಅಶೋಕ್ ಮಾತಿಗೆ ಜಗ್ಗಲ್ಲ. ಒಬ್ಬ ಮನುಷ್ಯ ಧೈರ್ಯವಾಗಿ ನಿಂತರೆ ಅದೇ ಬಹುಮತ ಎಂದು ಸೂಚ್ಯವಾಗಿ ತಿಳಿಸಿದರು.

ಅಶೋಕ ಕೊಳಲಿ ಕೋಳಿ ನೃತ್ಯಕ್ಕೆ ನಗು ಚೆಲ್ಲಿದ ಚಿಣ್ಣರು★ ಕುದ್ರೊಳಿ ಗಣೇಶ ಅವರ ಜಾದೂಗೆ ಬೆರಗಾದ ಮಕ್ಕಳು

ರಾಯಚೂರು ಉತ್ಸವದ ಅದ್ಭುತ ಮಕ್ಕಳ ಹಬ್ಬಕ್ಕೆ ಅದ್ದೂರಿ ಚಾಲನೆ



ರಾಯಚೂರು ಫೆ.02

ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ನಿಮಿತ್ತ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಮತ್ತು ಮಹಾನಗರ ಪಾಲಿಕೆಯ ಆಶ್ರಯದದಲ್ಲಿ ಹಮ್ಮಿಕೊಂಡಿರುವ ಅದ್ದೂರಿ ಮಕ್ಕಳ ಹಬ್ಬಕ್ಕೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಫೆ.2ರಂದು ಚಾಲನೆ ನೀಡಿದರು.

ಈ ಹಬ್ಬಕ್ಕಾಗಿ ನಗರದ ಮಹಾತ್ಮ ಗಾಂಧೀಜಿ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲೆಯ ಬೇರೆ ಬೇರೆ ಶಾಲೆಯ ಮಕ್ಕಳು ಕಿಕ್ಕಿರಿದು ಸೇರಿದ್ದರು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾಧಿಕಾರಿಗಳು ಮಾತನಾಡಿ, ಸಾರ್ವಜನಿಕರ ಸಲಹೆ ಮತ್ತು ಮಕ್ಕಳಿಗಾಗಿಯೇ ನಾವು ರಾಯಚೂರು ಉತ್ಸವದಲ್ಲಿ ಮಕ್ಕಳ ಕಾರ್ಯಕ್ರಮಗಳಿಗೆ ಏರ್ಪಾಡು ಮಾಡಿದ್ದೇವೆ. ಸಾರ್ವಜನಿಕರ, ಸಂಘ ಸಂಸ್ಥೆಗಳ, ಶಿಕ್ಷಣ ಸಂಸ್ಥೆಗಳ ಸಹಕಾರ, ಪರಿಶ್ರಮದಿಂದ ಈ ಮಕ್ಕಳ ಹಬ್ಬ ನಡೆಯುತ್ತಿದೆ.

ಮನರಂಜನೆ ಜೊತೆಗೆ ಜ್ಞಾನ ಸಂಪಾದನೆಗೆ ಸಹ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಮಕ್ಕಳನ್ನು ಕರೆತಂದು ಸಹಕರಿಸಿದ ರಾಯಚೂರು ಜಿಲ್ಲೆಯ ಎಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಅಭಿನಂದನೆಗಳ ತಿಳಿಸುವೆ. ಮಕ್ಕಳನ್ನು ಸುರಕ್ಷಿತವಾಗಿ ನೋಡಿಕೊಳ್ಳಬೇಕು ಎಂದು ಎಲ್ಲ ಶಾಲೆಗಳ ಶಿಕ್ಷಕ ಶಿಕ್ಷಕಿಯರಲ್ಲಿ ಮನವಿ ಮಾಡಿವೆ ಎಂದರು.

ಜಿಲ್ಲಾ ಪಂಚಾಯ್ ಸಿಇಓ ಈಶ್ವರ ಕಾಂದೂ ಅವರು ಮಾತನಾಡಿ, ಈ ಮಕ್ಕಳ ಹಬ್ಬವು ಜಿಲ್ಲೆಯಲ್ಲಿ ವಿನೂತನವಾಗಿ ನಡೆಯುತ್ತಿರುವುದು ನಮಗೆ ಸ್ಪೂರ್ತಿ ತಂದಿದೆ ಎಂದು ತಿಳಿಸಿದರು.

ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಮಾತನಾಡಿ, ಮಕ್ಕಳು ಈ ಲೋಕದ ಆಸ್ತಿ. ಮಕ್ಕಳನ್ನು ರಂಜಿಸಲು, ಅವರ ಸ್ಮೃತಿಪಟಲದಲ್ಲಿ ಉಳಿಯುವಂತಹ ಕಾರ್ಯಕ್ರಮಕ್ಕೆ ಈ ಮಕ್ಕಳ ಹಬ್ಬ ಆಯೋಜಿಸಲಾಗಿದೆ ಎಂದು ತಿಳಿಸಿದರು.

ರೇಸ್ ಕಾನ್ಸೆಪ್ಟ್ ಶಾಲೆಯ ತನ್ವಿ ನಾಯಕ ಅವರ ಗೀತೆಯ ಮೂಲಕ ಮಕ್ಕಳ ಹಬ್ಬದ ಕಾರ್ಯಕ್ರಮ ಆರಂಭಗೊಂಡಿತು.

ಡಿ.ಸಿ., ಸಿಇಓ, ಪಾಲಿಕೆ ಆಯುಕ್ತರಿಂದ ಹಬ್ಬದ ವೀಕ್ಷಣೆ: ಕಾರ್ಯದೊತ್ತಡದ ಮಧ್ಯೆಯೂ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿಇಓ ಮತ್ತು ಮಹಾನಗರ ಪಾಲಿಕೆಯ ಅಧಿಕಾರಿಗಳು ವೇದಿಕೆ ಎದುರುಗಡೆ ಕುಳಿತು ಮಕ್ಕಳ ಕಾರ್ಯಕ್ರಮದ ವೀಕ್ಷಣೆ ನಡೆಸಿದರು.

ಕೋಳಿ ನೃತ್ಯಕ್ಕೆ ಕಿರುಚಿದ ಮಕ್ಕಳು: ಖ್ಯಾತ ಕಲಾವಿದ ಅಶೋಕ ಕೊಳಲಿ ಅವರು ಪ್ರಸ್ತುತಪಡಿಸಿದ ಕೋಳಿ ನೃತ್ಯಕ್ಕೆ ಮಕ್ಕಳು ಜೋರಾಗಿ ಕಿರುಚಿ ಸಂತಷ ವ್ಯಕ್ತಪಡಿಸಿದರು.

ಕುದ್ರೊಳಿ ಗಣೇಶರ ಜಾದೂಗೆ ಮರುಳಾದ ಮಕ್ಕಳು: ಸಮಾರಂಭದಲ್ಲಿ ಮಕ್ಕಳು ಮರಳಾಗುವಂತೆ ಮಾಡಿದ್ದು ಕುದ್ರೊಳಿ ಗಣೇಶ ಅವರ ಜಾದೂ. ತಮ್ಮ ಕೈಚಳಕದಿಂದ ಬಗೆಬಗೆಯ ಜಾದೂ ಮಾಡುತ್ತಿದ್ದಂತೆ ಮಕ್ಕಳು ಚಪ್ಪಾಳೆ ತಟ್ಟಿದರು.

ಸಮಾರಂಭದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ, ತಹಸೀಲ್ದಾರ ಸುರೇಶ ವರ್ಮಾ, ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ಅಧ್ಯಕ್ಷರಾದ ಕೇಶವರಾವ್ ರೆಡ್ಡಿ ಹಾಗೂ ಮುರಳೀಧರ,

ಜಿಲ್ಲಾ ನೌಕರರ ಸಂಘದ ಅಧ್ಯಕ್ಷರಾದ ಕೃಷ್ಣ ಶಾವಂತಗೇರಿ ಸೇರಿದಂತೆ ಇತರರ ಇದ್ದರು. ವೈ.ಕೆ.ಯಶೋಧಾ ಅವರು ನಿರೂಪಿಸಿದರು.

ಎಡದೊರೆನಾಡು ಉತ್ಸವ ರಥಯಾತ್ರೆಗೆ ತಾಲೂಕ ಆಡಳಿತದಿಂದ ಅದ್ದೂರಿಯಾಗಿ ಸ್ವಾಗತ.

ಉತ್ಸವದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸೋಣ - ಅಶೋಕಪವಾರ



ಕಾರ್ಯಕರ್ತೆಯರು ಕುಂಭ ಕಳಶ ಹಿಡಿದು ಶೋಭೆ ತಂದುಕೊಟ್ಟರು.

ಸಿರವಾರ.ಫೆ.2-

ಎಡೆದೊರೆ ನಾಡು ರಾಯಚೂರು ಉತ್ಸವದ ಜ್ಯೋತಿ ರಥಯಾತ್ರೆಯನ್ನು ಪಟ್ಟಣದ ಬಸವೇಶ್ವರ ವೃತ್ತದಲ್ಲಿ ತಾಲೂಕು ಆಡಳಿತ ,ಪ. ಪಂ ಯಿಂದ ಅದ್ದೂರಿಯಾಗಿ ಸ್ವಾಗತಿಸಿಕೊಳಲಾಯಿತು. ವೃತ್ತದಲ್ಲಿ ರಥಕ್ಕೆ ಪುಷ್ಪಾರ್ಪಣೆ ಮಾಡಿ, ಪಂಜು ಹಿಡಿದು ರಥಯಾತ್ರೆಗೆ ಚಾಲನೆ ನೀಡಲಾಯಿತು.

ಈ ಕಾರ್ಯಕ್ರಮದಲ್ಲಿ ಸಿರವಾರ ತಹಸೀಲ್ದಾರ್ ಅಶೋಕಪವಾರ ಮಾತನಾಡಿ ರಾಯಚೂರು ಲಿಂ

ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ, ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮಾಲಿಗೌಡರ ಓಣಿ ವಿದ್ಯಾರ್ಥಿಗಳಿಂದ ವಿವಿಧ ವೃತ್ತಗಳಲ್ಲಿ ನೃತ್ಯ ಪ್ರದರ್ಶನ ಮಾಡಿದರು ಯಾತ್ರೆಗೆ ಮೆರಗು ತಂದರು. ಅಂಗನವಾಡಿ ಕಾರ್ಯಕರ್ತೆಯರು ಕುಂಭ ಕಳಶ ಹಿಡಿದು ಶೋಭೆ ತಂದುಕೊಟ್ಟರು.

ವಿದ್ಯಾರ್ಥಿಗಳು ಕಲಿಕೋತ್ಸವದಲ್ಲಿ ತಯಾರಿಸಿದ ಎಡೆದೊರೆ ನಾಡು ಉತ್ಸವಕ್ಕೆ ಸ್ವಾಗತ ಎಂಬ ಭಿತ್ತಿಚಿತ್ರಗಳನ್ನು ಪ್ರದರ್ಶನ ಮಾಡಿದ್ದು ಕಂಡುಬಂತು. ಗ್ರಾಮ ಪಂಚಾಯತಿಯಿಂದ ಮಹಾತ್ಮ ಗಾಂಧಿ ವೃತ್ತ ಮಾರ್ಗವಾಗಿ ಮಹರ್ಷಿ ವಾಲ್ಮೀಕಿ ವೃತ್ತವರೆಗೆ ಜ್ಯೋತಿ ರಥಯಾತ್ರೆ ಸಾಗಿತು.

ತಹಸೀಲ್ದಾರ ಅಮರೇಶ ಬಿರಾದರ್ ಮಾತನಾಡಿ ಎರಡು ದಶಕದ ನಂತರ ಜಿಲ್ಲಾ ಉತ್ಸವ ನಡೆಯುತ್ತಿದ್ದು ಕಾರ್ಯಕ್ರಮದಲ್ಲಿ ಕಲೆ ಸಾಹಿತ್ಯ,ಸಂಗೀತ ಕ್ರೀಡೆ ಸಾಂಸ್ಕೃತಿಕ ಕಾರ್ಯಕ್ರಮಗಳು, ಆಹಾರ ಮೇಳ, ಉದ್ಯೋಗ ಮೇಳ, ಹೇಲಿಕ್ಯಾಪ್ಟರ್ ರೌಂಡ, ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳು ಜರುಗಲಿದ್ದು ಸಿರವಾರ ತಾಲೂಕು ಒಳಗೊಂಡಂತೆ ಜಿಲ್ಲೆಯ ನಾಗರೀಕರು ಈ ಉತ್ಸವದಲ್ಲಿ ಸಕ್ರಿಯರಾಗಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು. ಈ ಕುರಿತು ಹಿರಿಯ ಮುಖಂಡ ಚುಕ್ಕಿ ಸೂಗಪ್ಪ ಸಾಹುಕಾರ, ಪ.ಪಂಚಾಯತಿ ಅಧ್ಯಕ್ಷ ಹಾಜಿಚೌದ್ರಿ, ಕಾಂಗ್ರೇಸ್ ಜಿಲ್ಲಾ ಮಹಿಳಾ ಘಟಕ ಅಧ್ಯಕ್ಷೆ ನಿರ್ಮಲಾ ಬೆಣ್ಣೆ, ಬಿಇಒ ಚಂದ್ರಶೇಖರ ದೊಡ್ಡಮನೆ, ಕಾಂಗ್ರೇಸ್ ತಾಲೂಕ ಮಹಿಳಾ ಘಟಕ ಅಧ್ಯಕ್ಷೆ ರೇಣುಕಾಕ ಮಾತನಾಡಿದರು. ಜ್ಯೋತಿ ರಥಯಾತ್ರೆಯು ಬಸವೇಶ್ವರ ವೃತ್ತದಿಂದ ಪ್ರಾರಂಭವಾಗಿ ಲಿಂಗಸ್ಗೂರು ಮಾರ್ಗವಾಗಿ ಎಪಿಎಂಸಿ, ಟಿಪ್ಪು ಸುಲ್ತಾನ್ ಸರ್ಕಲ್, ಬಯಲು ಆಂಜನೇಯ್ಯದೇವಸ್ಥಾನ, ವಾಲ್ಮೀಕಿ ವೃತ್ತ, ಬಸ್ ನಿಲ್ದಾಣ, ಪಿಡಬ್ಲ್ಯೂಡಿ ಕ್ಯಾಂಪ್ ಮಾನ್ವಿ ಕ್ರಾಸ್ ಗೆ ತೆರಳಿ ಹಟ್ಟಿಗೆ ಬೀಳ್ಕೊಡಲಾಯಿತು.

3ನೇ ಪುಟಕ್ಕೆ

ರೈಲ್ವೆಗೆ ದಾಖಲಾರ್ಹ ಅನುದಾನ ನೀಡಿರುವ ಬಜೆಟ್ ಸ್ವಾಗತಾರ್ಹ: ಡಾ.ಬಾಬುರಾವ್



ರಾಯಚೂರು,ಫೆ.02-

ಕೇಂದ್ರ ವಿತ್ತ ಮಂತ್ರಿ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ 2026-27 ನೇ ಸಾಲಿನ ಆಯ- ವ್ಯಯದಲ್ಲಿ ರೈಲ್ವೆ ಇಲಾಖೆಗೆ ಬಂಪರ್ ಕೊಡುಗೆ ನೀಡಿರುವುದು ಒಳ್ಳೆಯ ಬೆಳವಣಿಗೆ ಎಂದು ರೈಲ್ವೆ ಸಲಹಾ ಮಂಡಳಿಯ ಮಾಜಿ ಸದಸ್ಯ ಡಾ.ಬಾಬುರಾವ್ ಹರ್ಷ ವ್ಯಕ್ತಪಡಿಸಿದ್ದಾರೆ.

ಬಜೆಟ್ ಕುರಿತು ಪ್ರತಿಕ್ರಿಯೆ ನೀಡಿರುವ ಅವರು ರೈಲ್ವೆ ಇಲಾಖೆಗೆ ರೂ.2.93 ಲಕ್ಷ ಕೋಟಿ ಒದಗಿಸಿದ್ದಲ್ಲದೆ 7 ಹೊಸ ಸೂಪರ್ ಫಾಸ್ಟ್ ರೈಲು ಓಡಿಸಲು ಮುಂದಾಗಿರುವುದು. ಅದರಲ್ಲಿ ಎರಡು ರೈಲುಗಳು ರಾಜ್ಯಕ್ಕೆ ಸಿಕ್ಕಿರುವುದು ಸಂತಸದ ವಿಚಾರವಾಗಿದೆ.ಇದರಲ್ಲಿ ಕಲ್ಯಾಣ ಕರ್ನಾಟಕಕ್ಕೂ ಪಾಲು ಸಿಕ್ಕಿದ್ದು ಖುಷಿಯ ವಿಷಯವಾಗಿದೆ ಎಂದರು.

ಕರ್ತವ್ಯ ಮಂತ್ರದೊಂದಿಗೆ ದೇಶದ ವಿಕಸಿತದ ಗುರಿ ಹೊಂದಿರುವ ಬಜೆಟ್ ಸ್ವಾಗತಾರ್ಹವಾಗಿದೆ ಎಂದು ತಿಳಿಸಿದ್ದಾರೆ.

ಆಶಾದಾಯಕ ಬಜೆಟ್ ಇದಾಗಿದ್ದು, ವಿದೇಶಗಳಿಗೆ ಪ್ರಯಾಣಿಸುವ ಭಾರತೀಯರ ಮೇಲಿನ ತೆರಿಗೆಯನ್ನು ಪ್ರತಿಶತ ಎರಡರಷ್ಟು ಕಡಿಮೆ ಮಾಡಿದ್ದಾರೆ. ಮಾರ್ಚ್ 31ರವರೆಗೆ ಟ್ಯಾಕ್ಸ್ ಫೈಲ್ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಬೆಂಗಳೂ ರು ಹೈದರಾಬಾದ್, ಬೆಂಗಳೂರು ಚೆನ್ನೈ ಹೈಸ್ಪೀಡ್ ಕಾರಿಡಾರ್ ನೀಡಿದ್ದಾರೆ. ಸಿಗರೇಟ್ ಮತ್ತು ಔಷಧಗಳ ಮೇಲೆ ತೆರಿಗೆ ಕಡಿಮೆ ಮಾಡುವ ಮೂಲಕ ಜನರಿಗೆ ಅಗ್ಗ ಮಾಡಿದ್ದಾರೆ. ಬಡವರ ಪರವಾದ, ಆಶಾದಾ ಯಕ ಬಜೆಟ್ ಇದಾಗಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.



ರಾಯಚೂರು ಮಂಗಳವಾರ ಪೇಟೆಯಲ್ಲಿ ಮಡಿವಾಳ ಮಾಚಿದೇವ ಜಯಂತಿ ಆಚರಣೆ

ರಾಯಚೂರು : ವಾರ್ಡ್ ನಂ.14 ರ ಮಂಗಳವಾರ ಪೇಟೆಯಲ್ಲಿ ಮಡಿವಾಳ ಮಾಚಿದೇವ ಜಯಂತಿಯನ್ನು ಭಕ್ತಿಭಾವದಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಭಕ್ತರು ಮಾಚಿದೇವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರ ತತ್ವ, ಸಂದೇಶಗಳನ್ನು ಸ್ಮರಿಸಿದರು.

ಸಮಾಜದಲ್ಲಿ ಸಮಾನತೆ, ಶ್ರಮದ ಗೌರವ ಮತ್ತು ಸೌಹಾರ್ದತೆಯನ್ನು ಬೆಳೆಸುವಂತೆ ಮುಖಂಡರು ಕರೆ ನೀಡಿದರು. ಕಾರ್ಯಕ್ರಮದಲ್ಲಿ ತಿಪ್ಪಣ್ಣ, ಯು. ಅಂಜನೇಯ, ಹನುಮಂತು, ಬಿ.ನಾಗರಾಜ್ ಪೂಜಾರಿ, ಹನುಮಂತು ಅಂಗಡಿ, ಸ್ವಾಮಿ ಶಿವಪ್ಪ, ಕೆ.ವೆಂಕಟೇಶ್, ಬಿ.ತಾಯಣ್ಣ, ಪ್ರಕಾಶ್ ಶಿಕ್ಷಕರು, ಕೆ.ಶ್ರೀಕಾಂತ್, ಎನ್. ಸುರೇಶ್, ಬಿ.ಆಂಜನೇಯ ಸಿಎಂಸಿ, ವಿನೋದ್ ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಾಗಿನೆಲೆ ಕನಕಗುರು ಪೀಠ ಶೋಷಿತರ, ಹಿಂದುಳಿದ ಪರ ನಿಂತು ಅನೇಕ ಜನಪರ ಕಾರ್ಯಕ್ರಮಗಳು ಕೊಟ್ಟಿದೆ

ಸಮಾಜ ತಿದ್ದುವ ಕೆಲಸಕ್ಕೆ ಶ್ರೀಗಳು ಹೆಚ್ಚಿನ ಆದತ್ಯೆ ನೀಡಿದರು:ತಂಗಡಿ

ಜಾಲಹಳ್ಳಿ, ಫೆ.02-

ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾಗಿನೆಲೆ ಕನಕಗುರು ಪೀಠ ಹಿಂದುಳಿದ, ಶೋಷಿತರ ಪರ ನಿಂತು ಅನೇಕ ಜನಪರ ಕಾರ್ಯಕ್ರಮಗಳು ಮೂಲಕ ರಾಜ್ಯಕ್ಕೆ ಒಂದು ಉತ್ತಮ ಸಂದೇಶ ಶ್ರೀಗಳು ನೀಡಿದರು ಎಂದು ಕನ್ನಡ ಸಾಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಡಗಿ ಹೇಳಿದರು.



ಸಮೀಪದ ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠ ತಿಂಥಿಣಿ ಶಾಖಾಮಠ ಕಲಬುರ್ಗಿ ವಿಭಾಗ ಮಠದಲ್ಲಿ ರವಿವಾರ ಆಯೋಜಿಸಿದ್ದ ಸಿದ್ದರಾಮನಂದಪುರಿ ಶ್ರೀಗಳ ಪುಣ್ಯಾರಾಧನೆ ಮತ್ತು ನುಡಿನಮನ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು. ರಾಜ್ಯದಲ್ಲಿ ಮಠಮಾನ್ಯಗಳು ಅನ್ನದಾಸೋಹ ಜೊತೆಗೆ ಅಕ್ಷರ ದಾಸೋಹ ನೀಡುತ್ತಿರುವುದು ನಿಜೂಕ್ಕು ಶ್ಲಾಘನೀಯ ಎಂದರು. ಶ್ರೀಗಳಿಗೆ ಆರೋಗ್ಯ ಸಮಸ್ಯವಿದ್ದರೂ, ಸಮಾಜ ಕಟ್ಟುವ ಕೆಲಸದಲ್ಲಿ ನಿರಂತರಾಗಿದ್ದರು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾಗಿನೆಲೆ ಕನಕಗುರು ಪೀಠ ವಿವಿಧ ಕಾರ್ಯಕ್ರಮಗಳು ಮಾಡುವ ಮೂಲಕ ಒಳ್ಳೆಯ ಸಂದೇಶ ಸಾರಿದ್ದರು ಎಂದು ಹೇಳಿದರು. ಸಮಾಜದಲ್ಲಿರುವ ಮೌಂಢ್ಯ, ಕಂದಚಾರಗಳ ವಿರುದ್ಧ ಧ್ವನಿ ಎತ್ತಿದ್ದರು. ಮಠ ಸ್ಥಾಪನೆ ಮಾಡಬೇಕೆಂದು ಇಲ್ಲಿಗೆ ಬಂದಾಗ ಯಾವುದೇ ಸೌಲಭ್ಯಗಳು ಇಲ್ಲದಿದ್ದರೂ, ಸಣ್ಣ ಗುಡುಸಿನಲ್ಲಿ ಪ್ರಾರಂಭಿಸಿದ ಶಾಖಾ ಮಠ ಬಹಳ ಬದಲಾವಣೆ ಕಂಡಿದೆ ಎಂದು ಹೇಳಿದರು.

ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಶರಣ ಪ್ರಕಾಶ ಪಾಟೀಲ್ ಮಾತನಾಡಿ, ಕಾಗಿನೆಲೆ ಕನಕಗುರು ಪೀಠ ಹಾಲುಮತ ಸಮಾಜಕ್ಕೆ ಸೀಮಿತವಾಗದೇ ಎಲ್ಲಾ ಸಮಾಜಗಳ ಪರ ಧ್ವನಿ ಎತ್ತಿದೆ. ಪ್ರತಿವರ್ಷ ಹಾಲುಮತ ಸಾಂಸ್ಕೃತಿ ವೈಭವ ಕಾರ್ಯಕ್ರಮಗಳು ಮಾಡುವ ಮೂಲಕ ಸಮಾಜದಲ್ಲಿ ಬದಲಾವಣೆ ತಂದಿದ್ದಾರೆ ಎಂದರು. ಪ್ರತಿಯೊಬ್ಬರು ಆಧ್ಯಾತ್ಮಿಕ ಚಿಂತನೆಗಳು ಮೈಗೂಡಿಸಿಕೊಳ್ಳುವ ಬಗ್ಗೆ ಶ್ರೀಗಳು ಜಾಗೃತಿ ಮೂಡಿಸಿದರು. ಬಡಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸೌಲಭ್ಯ ನೀಡಿ, ಉತ್ತಮ ಭವಿಷ್ಯ ರೂಪಿಸಿದ್ದಾರೆ. ಡಾ.ಬಿ.ಆರ್ ಅಂಬೇಡ್ಕರ್, ಬಸವಣ್ಣ, ಬುದ್ಧ ಸಮಾಜದಲ್ಲಿ ಸಮಾನತೆ ನೀಡಿದ ಮಹನೀಯರ ವಿಚಾರಗಳ ಮಾರ್ಗದಲ್ಲೇ ಮಠದ ವಿದ್ಯಾರ್ಥಿಗಳಿಗೆ ಬೋಧನೆ ಪಾಠ ನೀಡಿದ್ದಾರೆ. ಹಿಂದುಳಿದ, ಶೋಷಿತ, ದಲಿತರ ಪರ ಚಿಂತನೆವೊಳ್ಳ ಶ್ರೀಗಳನ್ನು ಇಲ್ಲಿ ಸ್ಮರಿಸಬೇಕಾಗಿದೆ ಎಂದು ಹೇಳಿದರು. ಇದೆ ಸಂದರ್ಭದಲ್ಲಿ ಮಾಜಿ ಸಚಿವ ಬಂಡೆಪ್ಪ ಕಾಸಿಂಪೂರು ಮಾತನಾಡಿ, ಸಿದ್ದಾರಾಮನಂದಪುರಿ ಸ್ವಾಮೀಜಿಗಳು ಸಮಾಜ ಕಟ್ಟುವ ಕೆಲಸ ಮಾಡಿದರು. ಶ್ರೀಗಳು ಹಾಕಿ ಕೊಟ್ಟಿರುವ ಮಾರ್ಗದಲ್ಲಿ ಅವರು ಕಂಡಿರುವ ಕನಸು ನನಸು ಮಾಡಲು ನಾವೆಲ್ಲರೂ ಕೈಜೋಡಿ ಕಂಕಣ ಬದ್ಧರಾಗಿ ಮಠ ಮುನ್ನಡಿಸುವ ಕೆಲಸ ಮಾಡಬೇಕು ಎಂದು ಹೇಳಿದರು. ಕಾಗಿನೆಲೆ ಕನಕಗುರು ಪೀಠ ಅಭಿವೃದ್ಧಿಗೆ ಸಿಎಂ ಸಿದ್ದರಾಮಯ್ಯನವರ ಮಂಡಿಸುವ

3ನೇ ಪುಟಕ್ಕೆ

ಬಳ್ಳಾರಿ: ರಾಜ್ಯದಲ್ಲಿಯೇ ಮೊದಲ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಧ್ಯಸ್ಥಿಕೆ ಕೇಂದ್ರ ಉದ್ಘಾಟನೆ

ಗ್ರಾಹಕರ ವ್ಯಾಜ್ಯಗಳ ಇತ್ಯರ್ಥದಲ್ಲಿ ಕರ್ನಾಟಕ 2ನೇ ಸ್ಥಾನ



ಬಳ್ಳಾರಿ,ಫೆ.02-

ರಾಜ್ಯದಲ್ಲಿ ಗ್ರಾಹಕರ ಹಕ್ಕುಗಳಿಗೆ ಚ್ಯುತಿಯಾದ ಪ್ರಕರಣಗಳ ಇತ್ಯರ್ಥದಲ್ಲಿ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಎರಡನೇ ಸ್ಥಾನ ಪಡೆದು ಕೊಂಡಿದೆ ಎಂದು ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಟಿ.ಜಿ ಶಿವಶಂಕರೇಗೌಡ ಅವರು ಹೇಳಿದರು.

ಶನಿವಾರದಂದು ಜಿಲ್ಲಾಡಳಿತ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಮತ್ತು ಜಿಲ್ಲಾ ನ್ಯಾಯವಾದಿಗಳ ಸಂಘ ಇವರ ಸಂಯುಕ್ತಾಶ್ರಯದಲ್ಲಿ ನಗರದ ರೈಲ್ವೇ ನಿಲ್ದಾಣ ಎದುರುಗಡೆಯ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿನ ಬಳ್ಳಾರಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಧ್ಯಸ್ಥಿಕೆ ಕೇಂದ್ರದ ನೂತನ ಕಟ್ಟಡ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಗ್ರಾಹಕರ ಕುಂದುಕೊರತೆಗಳನ್ನು ನಿಗದಿತ ಅವಧಿಯೊಳಗೆ ಮತ್ತು ಸಾರಾಂಶ ಕಾರ್ಯವಿಧಾನವನ್ನು ಅನುಸರಿಸುವ ಮೂಲಕ ಉಚಿತವಾಗಿ ಪರಿಹಾರ ಒದಗಿಸುವುದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳ ಮುಖ್ಯ ಉದ್ದೇಶ ಮತ್ತು ಕರ್ತವ್ಯವಾಗಿದೆ ಎಂದು ತಿಳಿಸಿದರು.

ಭಾರತ ದೇಶವು ಜಾಗತೀಕರಣ ಹೊಂದುತ್ತಿದೆ. ಅಭಿವೃದ್ಧಿಯತ್ತ ಮಾರುಕಟ್ಟೆ ವ್ಯವಸ್ಥೆಯಲ್ಲಿ ಗ್ರಾಹಕರ ಹಕ್ಕುಗಳಿಗೆ ಚ್ಯುತಿಯಾಗದಂತೆ ಅವರ ಹಿತಾಸಕ್ತಿ ಕಾಪಾಡಲು ದೇಶದಲ್ಲಿ ರಾಷ್ಟ್ರೀಯ ಗ್ರಾಹಕ ಸಂರಕ್ಷಣಾ ಕಾಯ್ದೆ 1986 ಜಾರಿಗೆ ತರಲಾಯಿತು. ಸಾರ್ವಜನಿಕರು ಗ್ರಾಹಕ ಕಾಯ್ದೆ, ಹಕ್ಕುಗಳ ಕುರಿತು ಜಾಗೃತಿ ಹೊಂದಬೇಕು ಎಂದರು.

ರಾಜ್ಯದಲ್ಲಿ 34 ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಗಳಿದ್ದು, ಗ್ರಾಹಕರ ವ್ಯಾಜ್ಯಗಳ ತ್ವರಿತ ಇತ್ಯರ್ಥಕ್ಕಾಗಿ ಹಂತ-ಹಂತವಾಗಿ ಎಲ್ಲಾ ಜಿಲ್ಲೆಗಳಲ್ಲೂ ಮಧ್ಯಸ್ಥಿಕೆ ಕೇಂದ್ರಗಳನ್ನು ಆರಂಭಿಸಲಾಗುವುದು ಎಂದು ತಿಳಿಸಿದರು.

ಸಮಾಜದಲ್ಲಿ ಡಿಜಿಟಲ್ ಖರೀದಿ ಹೆಚ್ಚಾಗಿದ್ದು, ಆನ್‌ಲೈನ್ ಮೂಲಕ ಅತಿ ಹೆಚ್ಚು ವಂಚನೆಗಳು ಆಗುತ್ತಿವೆ. ಈ ಕುರಿತು ಎಚ್ಚರಿಕೆಯಿಂದ ವ್ಯವಹರಿಸಬೇಕು. ಪ್ರಸ್ತುತದಲ್ಲಿ ಗ್ರಾಹಕರಿಗಿರುವ ಹಕ್ಕುಗಳ ಕುರಿತು ಜಾಗೃತಿ ಮೂಡಿಸುವ ಕಾರ್ಯವಾಗಬೇಕಿದೆ ಎಂದು ಹೇಳಿದ ಅಧ್ಯಕ್ಷರು, ಗ್ರಾಹಕರ ಹಕ್ಕುಗಳ ರಕ್ಷಣೆಯಲ್ಲಿ ಕರ್ನಾಟಕ ರಾಜ್ಯವನ್ನು ಪ್ರಥಮ ಸ್ಥಾನಕ್ಕೆ ತರಲು ನಾವೆಲ್ಲರೂ ಪ್ರಯತ್ನಿಸೋಣ ಎಂದು ಹೇಳಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ. ಶಾಂತಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿಯೇ ಪ್ರಥಮವಾಗಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಧ್ಯಸ್ಥಿಕೆ ಕೇಂದ್ರ ಆರಂಭಗೊಂಡಿರುವುದು ಸಂತಸದ ವಿಷಯವಾಗಿದ್ದು, ನಮ್ಮ ಕಲ್ಯಾಣ ಕರ್ನಾಟಕ ಭಾಗವು ಇನ್ನಷ್ಟು ಅಭಿವೃದ್ಧಿಯಾಗಲಿ ಎಂದು ಆಶಿಸಿದರು.

ಜಿಲ್ಲಾ ನ್ಯಾಯಾಲಯದಲ್ಲಿ ನುರಿತ ಮಧ್ಯಸ್ಥಿಕೆದಾರರು ಇದ್ದು, ಮಧ್ಯಸ್ಥಿಕೆ ಕೇಂದ್ರಕ್ಕೆ ಬೇಕಾದ ಅಗತ್ಯ ಸಹಕಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಒದಗಿಸಲಾಗುವುದು ಎಂದು ಹೇಳಿದರು.

ಸರ್ವರಿಗೂ ಸಮಬಾಳು- ಸರ್ವರಿಗೂ ಸಮಪಾಲು ಎನ್ನುವಂತೆ ಪ್ರತಿಯೊಬ್ಬರಿಗೂ ನ್ಯಾಯ ಒದಗಿಸುವುದು. ಕಕ್ಷಿದಾರರಿಗೆ ಸಕಾಲದಲ್ಲಿ ನ್ಯಾಯ ದೊರಕಿಸಿಕೊಡುವುದು ಆದ್ಯತೆಯಾಗುವುದರಿಂದ ನೂತನ ಕೇಂದ್ರಗಳಿಗೆ ಮನ್ನಣೆ ಬರಲಿದೆ ಎಂದರು. ವ್ಯಾಜ್ಯಗಳನ್ನು ಸಕಾಲದಲ್ಲಿ ಇತ್ಯರ್ಥಪಡಿಸುವುದರ ಮೂಲ ಕ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ದೇಶಕ್ಕೆ ಮಾದರಿಯಾಗ ಬೇಕು. ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಬೇಕು ಎಂದು ಶುಭ ಹಾರೈಸಿದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಎನ್.ತಿಪ್ಪೇಸ್ವಾಮಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಧ್ಯಸ್ಥಿಕೆಯ ಮೂಲಕ ಗ್ರಾಹಕರ ವ್ಯಾಜ್ಯಗಳ ಇತ್ಯರ್ಥ ಪಡಿಸುವಲ್ಲಿ ಬಳ್ಳಾರಿ ಜಿಲ್ಲೆಯು ಎರಡನೇ ಸ್ಥಾನದಲ್ಲಿದೆ. ಇದಕ್ಕೆ ವಕೀಲರ ಸಹಕಾರವು ಒಳಗೊಂಡಿದೆ ಎಂದು ತಿಳಿಸಿದ ಅವರು, ಮಧ್ಯಸ್ಥಿಕೆ ಕೇಂದ್ರ ಆರಂಭಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದವರೆಲ್ಲರಿಗೂ ಇದೇ ಸಂದರ್ಭದಲ್ಲಿ ಅಭಿನಂದಿಸಿದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಶಿರಸ್ತೇದಾರ ತೋಟದ ರವಿಕುಮಾರ ಅವರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ನಡೆದು ಬಂದ ಹಾದಿಯ ಬಗ್ಗೆ ಪ್ರಸ್ತುತ ಪಡಿಸಿದರು.

ಕಾರ್ಯಕ್ರಮದಲ್ಲಿ ರಾಜಿಯಾದಂತಹ ಕಕ್ಷಿದಾರರಿಗೆ ಪರಿಹಾರವಾಗಿ ಚೆಕ್ ವಿತರಿಸ ಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಎನ್. ತಿಪ್ಪೇಸ್ವಾಮಿ, ಮಹಾನಗರ ಪಾಲಿಕೆಯ ಮೇಯರ್ ಪಿ.ಗಾದೆಪ್ಪ, ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿ ಮಲ್ಲಿಕಾರ್ಜುನ ಈಶ್ವರಪ್ಪ ಕಮತಗಿ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಪಿ.ರಾಮಬ್ರಹ್ಮಂ, ರಾಜ್ಯ ವಕೀಲರ ಪರಿಷತ್ತಿನ ಸದಸ್ಯರಾದ ಕೆ.ಕೋಟೇಶ್ವರ ರಾವ್, ಜೆ.ಎಂ. ಅನಿಲ್ ಕುಮಾರ್, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಮಹಿಳಾ ಸದಸ್ಯರಾದ ಮಾರ್ಲಾ ಶಶಿಕಲಾ ಸೇರಿದಂತೆ ಜಿಲ್ಲಾ ನ್ಯಾಯಾಲಯದ ವಿವಿಧ ನ್ಯಾಯಾಧೀಶರು, ವಕೀಲರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧಿಕಾರಿ-ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಮೋಳಕೇರಾ ಗ್ರಾಮದಲ್ಲಿ ಆಕಸ್ಮಿಕ ಸ್ಫೋಟಗೊಂಡ ಸ್ಥಳಕ್ಕೆ ಸಚಿವ ಈಶ್ವರ ಬಿ.ಖಂಡ್ರೆ ಭೇಟಿ, ಪರಿಶೀಲನೆ



ಬೀದರ,ಫೆ.02-

ಹುಮನಾಬಾದ್ ತಾಲೂಕಿನ ಮೊಳಕೇರಾ ಗ್ರಾಮದಲ್ಲಿ ಮೋಳಗಿ ಮಾರಯ್ಯ ದೇವಸ್ಥಾನ ರಸ್ತೆಯಲ್ಲಿ ಸಂಭವಿಸಿದ ಅನುಮಾನಾಸ್ಪದ ವಸ್ತು ಸ್ಫೋಟಗೊಂಡ ಘಟನಾ ಸ್ಥಳಕ್ಕಿಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸ್ಥಳದಲ್ಲಿದ್ದ ಅಧಿಕಾರಿಗಳಿಂದ ಘಟನೆ ಕುರಿತು ವಿವರವಾದ ಮಾಹಿತಿ ಪಡೆದರು. ಮೇಲ್ನೋಟಕ್ಕೆ ಮನೆಯ ಮುಂಭಾಗದಲ್ಲಿ ರಾಸಾಯನಿಕ ಮಿಶ್ರಿತ ವಸ್ತುಗಳನ್ನು ಶೇಖರಣೆ ಮಾಡಿರುವುದರಿಂದ ಸ್ಫೋಟ ಸಂಭವಿಸಿರುವ ಸಾಧ್ಯತೆ ಇರುವುದಾಗಿ ಶಂಕಿಸಲಾಗಿದೆ. ಘಟನೆ ಕುರಿತು ಸಮಗ್ರ ತನಿಖೆ ನಡೆಯುತ್ತಿದ್ದು, ಸಂಪೂರ್ಣ ತನಿಖಾ ವರದಿ ಬಂದ ತಕ್ಷಣ ವರದಿ ಆಧಾರದ ಮೇಲೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಈ ಪ್ರಕರಣದಲ್ಲಿ ಯಾರೇ ಅಧಿಕಾರಿಗಳ ನಿರ್ಲಕ್ಷ್ಯ ಅಥವಾ ಲೋಪ ಕಂಡುಬಂದರೂ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದಾಗಿ ಸಚಿವರು ಹೇಳಿದರು.

ಇದೇ ಸಂದರ್ಭದಲ್ಲಿ ಸಚಿವರು ಗ್ರಾಮಸ್ಥರೊಂದಿಗೆ ಸಮಾಲೋಚನೆ ನಡೆಸಿದಾಗ ಕೆಮಿಕಲ್ ತ್ಯಾಜ್ಯದಿಂದ ಗ್ರಾಮದ ಸುತ್ತಲಿನ ವಾತಾರಣ, ಹವಾಮಾನ ಕಲುಷಿತಗೊಳ್ಳುತ್ತಿದೆ ಎಂದು ಸಚಿವರಿಗೆ ಗ್ರಾಮಸ್ಥರು ದೂರು ಸಲ್ಲಿಸಿದರು. ರಾಜ್ಯ ಪರಿಸರ ಇಲಾಖೆಯಿಂದ ಒಂದು ತಂಡವನ್ನು ಕರೆಯಿಸಿ ತನಿಖೆ ನಡೆಸಿ ತಪಿಸ್ಥರ ವಿರುದ್ಧ ಕಠಿಣವಾದ ಕ್ರಮವನ್ನ ಕೈಗೊಳ್ಳಲಾಗುವುದೆಂದು ಗ್ರಾಮಸ್ಥರಿಗೆ ಸಚಿವರು ಭರವಸೆ ನೀಡಿ ಧೈರ್ಯ ತುಂಬಿದರು. ಇಂತಹ ದುರ್ಘಟನೆಗಳು ಮರುಕಳಿಸದಂತೆ ಸಂಬಂಧಿತ ಇಲಾಖೆಗೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದರು.

ಈ ಘಟನೆಯಿಂದ ಯಾರೂ ಭಯಪಡುವ ಅಗತ್ಯವಿಲ್ಲ, ಈಗಾಗಲೇ ಉನ್ನತ ಮಟ್ಟದ ತನಿಖೆ ನಡೆಯುತ್ತಿದ್ದು, ಈ ಘಟನೆಯಲ್ಲಿ ಯಾರೇ ಶಾಮಿಲಾಗಿದ್ದರೂ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು. ಅದೇ ರೀತಿ ಸ್ಫೋಟದಲ್ಲಿ ಗಾಯಗೊಂಡ ಗಾಯಾಳುಗಳ ಆಸ್ಪತ್ರೆಯ ಚಿಕಿತ್ಸೆ ವೆಚ್ಚವನ್ನು ಜಿಲ್ಲಾಡಳಿತವೇ ಭರಿಸಲಿದೆ ಎಂದರು.

ಈ ಸಂದರ್ಭದಲ್ಲಿ ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್, ಹುಮನಾಬಾದ ಶಾಸಕ ಡಾ.ಸಿದ್ದಲಿಂಗ ಪಾಟೀಲ, ವಿಧಾನ ಪರಿಷತ್ ಶಾಸಕ ಡಾ.ಚಂದ್ರಶೇಖರ ಬಿ.ಪಾಟೀಲ, ಮಾಜಿ ಶಾಸಕ ರಾಜಶೇಖರ ಬಿ.ಪಾಟೀಲ, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾ ಯತ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ, ಹುಮನಾಬಾದ್ ತಹಸೀಲ್ದಾರ್ ಅಜುಂ ತಬ್‌ಸುವ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಬ್ರಿಮ್ಸ್ ಪುನರುಜ್ಜೀವನಕ್ಕೆ ಕ್ರಮ-ಸಚಿವ ಡಾ.ಶರಣಪ್ರಕಾಶ ಆರ್. ಪಾಟೀಲ

ಬೀದರ,ಫೆ.02-

ಹಲವಾರು ಅವ್ಯವಸ್ಥೆಗಳ ದೂರು ಹಿನ್ನೆಲೆಯಲ್ಲಿ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ.ಶರಣಪ್ರಕಾಶ ಆರ್.ಪಾಟೀಲ ಅವರಿಂದು ಬ್ರಿಮ್ಸ್ ಸಭಾಂಗಣದಲ್ಲಿ ಬ್ರಿಮ್ಸ್ ವೈದ್ಯಾಧಿಕಾರಿಗಳು ಹಾಗೂ ಆಡಳಿತ ಅಧಿಕಾರಿಗಳ ಸಭೆ ಜರುಗಿಸಿ ಸಮಸ್ಯೆಗಳನ್ನು ಆಲಿಸಿದರು.

ವೈದ್ಯಕೀಯ ವಿಜ್ಞಾನದ ಎಲ್ಲ ವಿಭಾಗದ ಮುಖ್ಯಸ್ಥರು ತಮ್ಮ ಅಗತ್ಯತೆಗಳನ್ನು ಹಾಗೂ ಅನುದಾನದ ಬೇಡಿಕೆಯನ್ನು ಪಟ್ಟಿ ಮಾಡಿ ಶೀಘ್ರವೇ ಸಲ್ಲಿಸುವಂತೆ ಸಚಿವರು ತಿಳಿಸಿದರು. ಮುಂಬರುವ ಬಜೆಟ್ ಅಧಿವೇಶನದಲ್ಲಿ ಬ್ರಿಮ್ಸನ್ ಒಟ್ಟಾರೆ ಅಭಿವೃದ್ಧಿಗೆ ವಿಶೇಷ ಅನುದಾನಕ್ಕಾಗಿ ಪ್ರಸ್ತಾವನೆ ಮಂಡಿಸಲಾಗುವುದೆಂದು ತಿಳಿಸಿದರು.

ತುರ್ತು ಚಿಕಿತ್ಸೆ ಆಪರೇಷನ್ ಥಿಯೇಟರ್‌ನ್ನು ತಕ್ಷಣವೇ ರಿಪೇರಿ ಮಾಡುವಂತೆ, ನೆಲಮಹಡಿಯಲ್ಲಿ ನೀರು ಸೋರಿಕೆ ಹಾಗೂ ಸಂಗ್ರಹಕ್ಕಾಗಿ ಕೈಗೊಂಡ ಕಾಮಗಾರಿಯನ್ನು ತಕ್ಷಣವೇ ರಿಪೇರಿ ಮಾಡುವಂತೆ ಪಿಡಬ್ಲ್ಯೂಡಿ ಕಾರ್ಯನಿರ್ವಾಹಕ ಅಭಿಯಂತರರಿಗೆ ತಿಳಿಸಿದರು.

ತಾತ್ಕಾಲಿಕ ಹಾಗೂ ಗುತ್ತಿಗೆ ಸಿಬ್ಬಂದಿ ನೌಕರರ ಸಂಬಳವನ್ನು ಡಿಸೆಂಬರ ತನಕ ಪಾವತಿಸಲಾಗಿದೆ ಹಾಗೂ ಉಳಿದ ಅನುದಾನವನ್ನು ಸಹ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು. ಹೃದಯ ಸಂಬಂಧಿತ ಚಿಕಿತ್ಸೆಗಳಿಗೆ ಗುಲಬರ್ಗಾದ ಜಯದೇವ ಆಸ್ಪತ್ರೆ ಜೊತೆ ಒಪ್ಪಂದ ಮಾಡಿಕೊಳ್ಳಲಾಗುತ್ತಿದೆ ಹಾಗೂ ಬ್ರಿಮ್ಸ್‌ನ ಕ್ಯಾತ್‌ಲ್ಯಾಬ್ ಸಹ ಆರಂಭಿಸಲಾಗುವುದೆಂದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ ಬಿ.ಕರಾಳೆ, ಬ್ರಿಮ್ಸ್ ನಿರ್ದೇಶಕ ಶಿವಕುಮಾರ ಶೆಟಕಾರ ಸೇರಿದಂತೆ ವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು.

ರಸ್ತೆ ಸುರಕ್ಷತಾ ಸಮಾರೋಪ ಸಮಾರಂಭದಲ್ಲಿ ನ್ಯಾ.ಡಿ.ಪಿ.ಕುಮಾರಸ್ವಾಮಿ ಅಭಿಪ್ರಾಯ

ಸುರಕ್ಷಿತವಾಗಿ ವಾಹನ ಚಲಾಯಿಸಿ, ಅಮೂಲ್ಯವಾದ ಜೀವ ಉಳಿಸಿ

ವಿಜಯನಗರ,ಫೆ.02-

ಮಾನವ ಜನ್ಮ ಮಹತ್ವವಾದದ್ದು, ನಮ್ಮಿಂದ ಇನ್ನೊಬ್ಬರ ಜೀವಕ್ಕೆ ತೊಂದರೆಯಾಗದ ರೀತಿಯಲ್ಲಿ ಬದುಕಿದಾಗ ಮಾತ್ರ ಜನ್ಮ ಸಾರ್ಥಕ ಎಂದು ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಡಿ.ಪಿ. ಕುಮಾರಸ್ವಾಮಿ ಅಭಿಪ್ರಾಯಪಟ್ಟರು.

ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ವತಿಯಿಂದ 37ನೇ ರಸ್ತೆ ಸುರಕ್ಷತಾ ಮಾಸಾಚರಣೆ ಸಮಾರೋಪ ಸಮಾರಂಭ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜೀವಿಸುವುದು ಪ್ರತಿಯೊಬ್ಬ ನಾಗರೀಕನ ಮೂಲಭೂತ ಹಕ್ಕು. ಆದ್ದರಿಂದ ರಸ್ತೆ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಅಪಘಾತ ತಪ್ಪಿಸುವ ಮೂಲಕ ಇತರರ ಹಕ್ಕುಗಳನ್ನು ಗೌರವಿಸಬೇಕು. ಚಾಲಕರ ಅಜಾಗರೂಕತೆ ವಾಹನ ಚಾಲನೆ, ಮದ್ಯಪಾನ, ಅತಿ ವೇಗದ ಚಾಲನೆ, ಮೊಬೈಲ್ ಫೋನ್ ಬಳಕೆ, ಸಂಚಾರ ನಿಯಮ ಉಲ್ಲಂಘನೆ, ಸೀಟ್ ಬೆಲ್ಟ್ ಮತ್ತು ಹೆಲ್ಮೆಟ್ ಧರಿಸದಿರುವುದು ಭೀಕರ ರಸ್ತೆ ಅಪಘಾತಕ್ಕೆ ಕಾರಣವಾಗಲಿದೆ.

ಇಂತಹ ರಸ್ತೆ ಅಪಘಾತದಿಂದ ಅಂಗವೈಕಲ್ಯತೆ ಉಂಟಾಗುವುದಲ್ಲದೆ, ಸಾವು-ನೋವು ಸಂಭವಿಸಬಹುದು. ಇದರಿಂದ ಕುಟುಂಬಗಳು ಆರ್ಥಿಕವಾಗಿ, ಸಾಮಾಜಿಕವಾಗಿ ಸಂಕಷ್ಟಕ್ಕೆ ಸಿಲುಕಲಿದೆ. ಆದ್ದರಿಂದ ಎಲ್ಲರೂ ಕಡ್ಡಾಯವಾಗಿ ಕಾನೂನು ಮತ್ತು ಸಂಚಾರಿ ನಿಯಮಗಳನ್ನು ಪಾಲಿಸಬೇಕಿದೆ. ಆದ್ದರಿಂದ ಪ್ರತಿಯೊಬ್ಬರೂ ಎಚ್ಚರಿಕೆಯಿಂದ ರಸ್ತೆ ಸುರಕ್ಷತಾ ಮತ್ತು ಸಂಚಾರಿ ನಿಯಮ ಪಾಲಿಸಬೇಕು. ಮಾನವ ಜನ್ಮ ತುಂಬಾ ಅಮೂಲ್ಯವಾದುದು, ಮತ್ತೊಬ್ಬರ ಜೀವಕ್ಕೆ



ತೊಂದರೆಯಾಗದ ರೀತಿಯಲ್ಲಿ ರಸ್ತೆ ಸುರಕ್ಷತಾ ಕ್ರಮಗಳ ಅನುಸರಿಸಿ ವಾಹನ ಚಾಲನೆ ಮಾಡಬೇಕು ಎಂದು ಸಲಹೆ ನೀಡಿದರು.

ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಮಾತನಾಡಿ, ವಾಹನ ಚಾಲಕರು ದೂರದ ಪ್ರಯಾಣ ಮಾಡುವಾಗ ವಾಹನ ದುರಸ್ಥಿಗೆ ಬಂದಾಗ ಕಲ್ಲು ಇನ್ನಿತರೆ ಉಪಕರಣ ಬಳಸಿ, ರಸ್ತೆಯಲ್ಲೇ ಬಿಟ್ಟು ತೆರಳುವರು. ಇದರಿಂದಾಗಿ ಹಲವು ಅಪಘಾತ ಸಂಭವಿಸಿವೆ. ಇದನ್ನರಿತು ಅಂತಹ ದೃಶ್ಯ ಕಂಡುಬಂದಲ್ಲಿ ಜಿಲ್ಲಾಧಿಕಾರಿಯಾಗಿ ಸ್ವತಃ ನಾನೇ ತೆರವುಗೊಳಿಸಿದ ಸಾಕಷ್ಟು ಉದಾಹರಣೆಗಳಿವೆ ಎಂದು ನೆರೆದವರಿಗೆ ಮನ ಮುಟ್ಟುವ ರೀತಿಯಲ್ಲಿ ಮನವರಿಕೆ ಮಾಡಿಕೊಟ್ಟರು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಕಾನೂನು ಬಗ್ಗೆ ಅರಿವು ಇಟ್ಟುಕೊಂಡು ಸುರಕ್ಷಿತವಾಗಿ ವಾಹನ ಚಲಾಹಿಸಿ, ನೀವು ಜೀವಿಸಿ ಇತರರನ್ನು ಜೀವಿಸಲು ಬಿಡಿ ಎಂದು ತಿಳಿ ಹೇಳಿದರು.

ರಸ್ತೆ ಸುರಕ್ಷತಾ ಮಾಸಾಚರಣೆ ಅಂಗವಾಗಿ ಪ್ರಬಂಧ, ಚಿತ್ರಕಲಾ ಹಾಗೂ ಭಾಷಣ ಸ್ಪರ್ಧೆ ಆಯೋಜಸಿಲಾಗಿದ್ದು, ಈ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದವರಿಗೆ ಪ್ರಶಸ್ತಿ ಪತ್ರ, ಬಹುಮಾನ ವಿತರಿಸಲಾಯಿತು. ಪ್ರಾದೇಶಿಕ ಸಾರಿಗೆ ಇಲಾಖೆ ಹಾಗೂ ಜಿಲ್ಲಾ ಕಾನೂನು ಸೇವಾ ಸಮಿತಿ ವತಿಯಿಂದ ಕಾರ್ಮಿಕರಿಗೆ ಎಲ್.ಎಲ್.ಆರ್ ಹಾಗೂ ಅಸಂಘಟಿತರಿಗೆ ಗುರುತಿನ ಚೀಟಿ ನೀಡಲಾಗಿದೆ.

ಈ ಸಂದರ್ಭದಲ್ಲಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ ಹಾಗೂ ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರಶಾಂತ್ ನಾಗಲಾಪುರ್, ಜಿಲ್ಲಾ ವರಿಷ್ಠಾಧಿಕಾರಿ ಎಸ್. ಜಾಹ್ನವಿ, ಅಪರ ಸಿವಿಲ್ ನ್ಯಾಯಾಧೀಶೆ ಜೆ.ಚೈತ್ರ, 2ನೇ ಅಪರ ಸಿವಿಲ್ ನ್ಯಾಯಾಧೀಶೆ ಶೃತಿ ತೇಲಿ, ಪ್ರಾದೇಶಿಕ ಸಾರಿಗೆ ಅಧಿಕಾರಿ ದಾಮೋದರ್, ವಕೀಲರ ಸಂಘದ ಅಧ್ಯಕ್ಷ ಗುಜ್ಜಲ್ ನಾಗರಾಜ್, ಹಾಗೂ ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರಪ್ಪ ದೊಂಬರ್ ಮತ್ತೂರು, ಕೆಎಸ್‌ಆರ್‌ಟಿಸಿ ವಿಭಾಗೀಯ ಹಿರಿಯ ನಿಯಂತ್ರಣಾಧಿಕಾರಿ ರಾಜೇಶ್ ಹುದ್ದಾರ್ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ಸ್ಪರ್ಶ ಕುಷ್ಠರೋಗ ಜಾಗೃತಿ ಅಭಿಯಾನಕ್ಕೆ ಚಾಲನೆ



ಕೊಪ್ಪಳ,ಫೆ.02-

ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿ ಹಾಗೂ ಮಹಾತ್ಮ ಗಾಂಧಿಜಿಯವರ ಪುಣ್ಯಸ್ಮರಣೆಯ ಅಂಗವಾಗಿ ಶುಕ್ರವಾರದಂದು ಮಹಾತ್ಮ ಗಾಂಧಿಜಿಯವರ ಸೇವಾ ಮತ್ತು ಶ್ರಮದ ಜ್ಞಾಪಕಾರ್ಥವಾಗಿ ವಿಶ್ವ ಕುಷ್ಠರೋಗ ವಿರೋಧಿ ದಿನವನ್ನಾಗಿ ಆಚರಿಸಲಾಗುತ್ತಿದ್ದು, ಕೊಪ್ಪಳ ಜಿಲ್ಲಾಧಿಕಾರಿಗಳ ಮುಖಾಂತರ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳ ಉಪಸ್ಥಿತಿಯಲ್ಲಿ ಸ್ಪರ್ಶ ಕುಷ್ಠರೋಗ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಕುಷ್ಠರೋಗವು ಮೈಕ್ರೋಬ್ಯಾಕ್ಟೀರಿಯಂ ಲೆಪ್ರೆ ಎಂಬ ಬ್ಯಾಕ್ಟೀರಿಯ ರೋಗಾಣುವಿನಿಂದ ಖಾಯಿಲೆಯಿರುವ ವ್ಯಕ್ತಿಯು ಕೆಮ್ಮಿದಾಗ ಮತ್ತು ಸೀನಿದಾಗ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ರೋಗದ ಲಕ್ಷಣಗಳು ಕಾಣಿಸಿಕೊಳ್ಳಲು ವ್ಯಕ್ತಿಯ ರೋಗ ನಿರೋಧಕ ಶಕ್ತಿಯ ಆಧಾರದ ಮೇಲೆ 2 ರಿಂದ 20 ವರ್ಷಗಳ ಕಾಲಾವಧಿ ಸಮಯ ತೆಗೆದುಕೊಳ್ಳಬಹುದು. ಕುಷ್ಠರೋಗವು ಮುಖ್ಯವಾಗಿ ಚರ್ಮ ಮತ್ತು ನರಗಳ ಮೇಲೆ ಪ್ರಭಾವ ಬೀರುವ ಖಾಯಿಲೆ ಆಗಿರುತ್ತದೆ. ಚರ್ಮದ ಮೇಲೆ ತಿಳಿ-ಬಿಳಿ ತಾಮ್ರ ವರ್ಣದ ಮುಖ್ಯವಾಗಿ ಸ್ಪರ್ಶ ಜ್ಞಾನವಿಲ್ಲದ ಮಚ್ಚೆಗಳು ಕಂಡುಬರುತ್ತದೆ. ಈ ಮಚ್ಚೆಗಳಲ್ಲಿ ಬೆವರುವಿಕೆ ಮತ್ತು ಕಾಲಕ್ರಮೇಣ ಕೂದಲು ಬೆಳೆಯದೇ ಇರುವುದು ಗಮನಾರ್ಹವಾಗಿರುತ್ತದೆ. ನರಗಳಲ್ಲಿ ಉರಿಯೂತ ಉಂಟಾಗಿ ನರಗಳು ದೌರ್ಬಲ್ಯಗೊಂಡು ಕ್ರಮೇಣ ಕೈ ಕಾಲುಗಳಲ್ಲಿ ಅಂಗವೈಕಲ್ಯವನ್ನುಂಟು ಮಾಡಬಹುದು. ಕುಷ್ಠರೋಗದಲ್ಲಿ ದೇಹದಲ್ಲಿ ಕಾಣಿಸಿಕೊಳ್ಳುವ ಮಚ್ಚೆಗಳ ಸಂಖ್ಯೆ ಮತ್ತು ನರಗಳ ಮೇಲಿನ ಪ್ರಭಾವದ ಆಧಾರದ ಮೇರೆಗೆ ಪಿ.ಬಿ ಮತ್ತು ಎಂ.ಬಿ ಎಂದು ಎರಡು ವಿಧಗಳಿರುತ್ತವೆ. ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ಕುಷ್ಠರೋಗಕ್ಕೆ ಪರೀಕ್ಷೆ ಮತ್ತು ಚಿಕಿತ್ಸೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಪೂರ್ಣವಾಗಿ ಉಚಿತವಾಗಿ ಲಭ್ಯವಿರುತ್ತದೆ. ಪಿ.ಬಿ ಖಾಯಿಲೆಗೆ ಆರು ತಿಂಗಳಿನವರೆಗೆ ಮತ್ತು ಎಂ.ಬಿ ಖಾಯಿಲೆಗೆ ಒಂದು ವರ್ಷದ ಅವಧಿಯವರೆಗೂ ಚಿಕಿತ್ಸೆಯನ್ನು ನೀಡಲಾಗುತ್ತದೆ. ಅಂಗವೈಕಲ್ಯ ಹೊಂದಿದ ರೋಗಿಗಳಿಗೆ ಮರು ಚಿಕಿತ್ಸಾ ಶಸ್ತ್ರಚಿಕಿತ್ಸೆಯನ್ನು (ಆರ್.ಸಿ,) ಸಂಪೂರ್ಣ ಉಚಿತವಾಗಿ ಮಾಡಲಾಗುತ್ತದೆ.

ಕೊಪ್ಪಳ ಜಿಲ್ಲೆಯಲ್ಲಿನ ಕುಷ್ಠರೋಗ ನಿರ್ಮೂಲನ ಕಾರ್ಯಕ್ರಮದಡಿಯಲ್ಲಿ ಏಪ್ರೀಲ್-2025 ರಿಂದ ಡಿಸೆಂಬರ್-2025 ರವರೆಗೆ ಒಟ್ಟು 88 ಹೊಸ ಪ್ರಕರಣಗಳು ಪತ್ತೆಹಚ್ಚಲಾಗಿದ್ದು, ಎಲ್ಲರಿಗೂ ಎಂ.ಡಿ.ಟಿ ಚಿಕಿತ್ಸೆಯನ್ನು ನೀಡಲಾಗಿರುತ್ತದೆ. ವಿಶೇಷವಾಗಿ 2025ರ ನವೆಂಬರ್ 24 ರಿಂದ 2025ರ ಡಿಸೆಂಬರ್ 19 ರವರೆಗೆ ಜಿಲ್ಲೆಯಲ್ಲಿ ''ಕುಷ್ಠರೋಗ ಪ್ರಕರಣ ಪತ್ತೆ ಹಚ್ಚುವ ಅಭಿಯಾನ'' ಹಮ್ಮಿಕೊಂಡು ಒಟ್ಟು 283 ಗ್ರಾಮಗಳಲ್ಲಿ ಸಮೀಕ್ಷೆ ನಡೆಸಿ ಒಟ್ಟು 20 ಪ್ರಕರಣಗಳನ್ನು ಪತ್ತೆ ಹಚ್ಚಿ ಚಿಕಿತ್ಸೆಯನ್ನು ಪ್ರಾರಂಭಿಸಲಾಗಿರುತ್ತದೆ. ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಅವರು, ಪ್ರತಿಜ್ಞಾವಿಧಿ ಯನ್ನು ಬೋಧಿಸಿ ಈ ಸಾಲಿನ ಘೋಷ ವಾಕ್ಯ: ''ತಾರತಮ್ಯವನ್ನು ಕೊನೆಗೊಳಿಸುವುದು, ಘನತೆಯನ್ನು ಕಾಪಾಡುವುದು'' ಎಂಬ ಘೋಷ ವಾಕ್ಯ ದೊಂದಿಗೆ ಭಿತ್ತಿಪತ್ರಗಳನ್ನು ಬಿಡುಗಡೆಗೊಳಿಸಿ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳಿಗೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸೂಚಿಸಿದರು.

ಈ ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ದರಾಮೇಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಲಿಂಗರಾಜ್ ಟಿ., ಜಿಲ್ಲಾ ಕ್ಷಯರೋಗ ಮತ್ತು ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ. ಎ.ಶಶಿಧರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.



ಮೊಳಕೇರಾ ಗ್ರಾಮದಲ್ಲಿ ಆಕಸ್ಮಿಕ ಸ್ಫೋಟ ಸಂಭವಿಸಿದ ಸ್ಥಳಕ್ಕೆ ಅಧಿಕಾರಿಗಳು ಭೇಟಿ, ಪರಿಶೀಲನೆ

ಬೀದರ, ಫೆ.02-

ಇಂದು ಹುಮನಾಬಾದ್ ತಾಲೂಕಿನ ಮೋಳಕೇರಾ ಗ್ರಾಮದಲ್ಲಿ ಅಕಸ್ಮಿಕವಾಗಿ ಸ್ಫೋಟ ಸಂಭವಿಸಿದ ಹಿನ್ನೆಲೆಯಲ್ಲಿ ಬೀದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ

ಗುಂಟಿ, ಅಪರ ಜಿಲ್ಲಾಧಿಕಾರಿ ಶಿವಾನಂದ ಬಿ.ಕರಾಳೆ, ಬಸವಕಲ್ಯಾಣ ಸಹಾಯಕ ಆಯುಕ್ತ ಪ್ರಕಾಶ ಕುದರೆ ಹಾಗೂ ಹುಮನಾಬಾದ್ ತಹಸೀಲ್ದಾರ್ ಅಜುಂ ತಬ್‌ಸುವ್ ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರಾಷ್ಟ್ರೀಯ ಸುರಕ್ಷತಾ ಮಾಸಾಚರಣೆ: ಫೆ.3 ರಂದು ಸಮಾರೋಪ ಸಮಾರಂಭ

ಕೊಪ್ಪಳ ಫೆ.02- 37ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಅಂಗವಾಗಿ ಜಿಲ್ಲೆಯಲ್ಲಿ ಜ.1 ರಿಂದ 31 ರವರೆಗೆ ವಿವಿಧ ಕಾರ್ಯಕ್ರಮಗಳ ಮೂಲಕ ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾರ್ವಜನಿಕರಿಗೆ ಅರಿವು ಮೂಡಿ ಸಲಾ ಗಿದ್ದು, ಮಾಸಾ ಚರಣೆ ಮುಕ್ತಾಯಗೊಂಡ ಹಿನ್ನೆಲೆ ಯಲ್ಲಿ ಫೆ.3 ರಂದು ಬೆಳಿಗ್ಗೆ 11 ಗಂಟೆಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಾರ್ಯಾಲಯದಲ್ಲಿ ಸಮಾರೋಪ ಸಮಾರಂಭ ಆಯೋಜಿಸ ಲಾಗಿದೆ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿ ತಿಳಿಸಿದ್ದಾರೆ.

ಒಂದನೇಯ ಪುಟದಿಂದ

ಎಡದೊರೆನಾಡು ಉತ್ಸವ ರಥಯಾತ್ರೆಗೆ ತಾಲೂಕ ಆಡಳಿತದಿಂದ ಅದ್ದೂರಿಯಾಗಿ ಸ್ವಾಗತ
ಉತ್ಸವದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸೋಣ - ಅಶೋಕಪವಾರ

ಮೆರಗು ತಂದ ವೇಷಭೂಷಣ:- ರಥಯಾತ್ರೆಗೆ ಸರ್ಕಾರಿ ಹಾಗೂ ಖಾಸಗಿ ಶಾಲೆ- ಕಾಲೇಜಿನ ವಿದ್ಯಾರ್ಥಿಗಳು ವಿವಿಧ ವೇ?ಷಭೂಷಣಗಳನ್ನು ಹಾಕಿಕೊಂಡು ಸಾಗಿದರು. ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಕುಂಬ ಕಳಸದೊಂದಿಗೆ ಸಾಗಿದರು. ಈ ಸಂದರ್ಭದಲ್ಲಿ ಯುವ ಮುಖಂಡರಾದ ಶಿವಶರಣಸಾಹುಕಾರ, ರಮೇಶ ದರ್ಶನಕರ್, ವಿಜಯಲಕ್ಷ್ಮಿ, ಪ.ಪಂ ಉಪಾದ್ಯಕ್ಷೆ ಲಕ್ಷ್ಮೀ, ಸದಸ್ಯರಾದ ಮಾರ್ಕಪ್ಪ, ಚನ್ನಪ್ಪ ಗಡ್ಲ,ಮುಖ್ಯಾಧಿಕಾರಿ ಸುರೇಶ ಶೇಟ್ಟಿ, ತಾ.ಪಂ ಇಒ ಶಶಿಧರ ಸ್ವಾಮಿ, ಸಿಡಿಪಿಒ ಗೋಕುಲ ಸಾಬ್, ವೈದ್ಯಾಧಿಕಾರಿ ಸುನೀಲ್ ಸರೋದೆ,ಸರ್ಕಾರಿ ನೌಕರ ಸಂಘದ ಅದ್ಯಕ್ಷ ಆರಿಪ್ ಮಿಯಾ ಕರವೆ ರಾಘವೇಂದ್ರ, ಸೂರಿ ಹುಸೇನಪ್ಪನಾಯಕ ಖಾ.ಶಿ.ಒಅದ್ಯಕ್ಷ ಪ್ರಕಾಶ ಪಾಟೀಲ್, ಕಸಾಪ ಅದ್ಯಕ್ಷ ಮೌನೇಶ ಹಣಗಿ, ಶಿಕ್ಷಕರ ಸಜಘದ ಅದ್ಯಕ್ಷ ಜಾವಿದ್ ಪಾಷ, ಮಹಿಬೂಬ ಪಾಷ, ಸಿಆರ್ ಪಿ ಮಹೇಶ, ಬಸವರಾಜ ಮನೋಹರ, ವೆಂಕಟೇಶ ದೊರೆ, ಚಂದ್ರಶೇಖರ ಹಡಪದ್, ರಾಜ ಬೋವಿ ಸೇರಿದಂತೆ ಇನ್ನಿತರರು ಇದ್ದರು.

ಕಾಗಿನೆಲೆ ಕನಕಗುರು ಪೀಠ ಶೋಷಿತರ, ಹಿಂದುಳಿದ ಪರ ನಿಂತು ಅನೇಕ ಜನಪರ ಕಾರ್ಯಕ್ರಮಗಳು ಕೊಟ್ಟಿದೆ
ಸಮಾಜ ತಿದ್ದುವ ಕೆಲಸಕ್ಕೆ ಶ್ರೀಗಳು ಹೆಚ್ಚಿನ ಆದತ್ಯೆ ನೀಡಿದರು:ತಂಗಡಿ

ಬಜೆಟ್‌ನಲ್ಲಿ 10 ಕೋಟಿ ರೂ. ಘೋಷಣೆ ಮಾಡಬೇಕೆಂದು ಮನವಿ ಮಾಡಿದರು. ಹಿಂದುಳಿದ ಮಠಗಳಿಗೆ ಸಿಎಂ ಸಿದ್ದರಾಮಯ್ಯನವರು ಅಭಿವೃದ್ಧಿಗೆ ಅನುದಾನ ನೀಡಿದಂತೆ ಕಾಗಿನೆಲೆ ಕನಕಗುರು ಪೀಠಕ್ಕೆ ವಿಶೇಷ ಅನುದಾನ ನೀಡಬೇಕು ಎಂದು ಹೇಳಿದರು. ಪರಿಷತ್ತಿನ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್ ಮಾತನಾಡಿ, ಸಿದ್ದಾರಾಮನಂದ ಸ್ವಾಮೀಜಿಗಳು ಹಾಲುಮತ ಸಮಾಜದಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಅನೇಕ ಶ್ರಮವಹಿಸಿದ್ದರು. ಹಾಲಮತ ಸಮಾಜ ಸೇರಿದಂತೆ ಇತರೆ ಸಮಾಜಗಳ ಬಗ್ಗೆ ಅಪಾರವಾದ ಕಾಳಜಿ ವಹಿಸಿದ್ದರು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾಗಿನೆಲೆ ಕನಕಗುರು ಪೀಠ ಪ್ರಸಿದ್ದೆ ಪಡೆದಿದ್ದು, ಅದರಂತೆ ಜನಪರ ಹಲವು ಕಾರ್ಯಕ್ರಮಗಳು ನೀಡುವ ಮೂಲಕ ಅಪಾರ ಕೊಡಗೆ ನೀಡಲಾಗಿದೆ ಎಂದು ಹೇಳಿದರು.

ಮಹಾ ಸಂಸ್ಥಾನ ಮಠದ ಪೂಜ್ಯಶ್ರೀ ನಿರಂಜನಾನದಸ್ವಾಮಿ ಹಾಗೂ ಹೊಸದುರ್ಗ ಶಾಖಾ ಮಠದ ಈಶ್ವರ ನಂದ ಸ್ವಾಮಿ ದಿವ್ಯ ಸಾನಿಧ್ಯ ವಹಿಸಿದ್ದರು ಇದೇ ಸಂದರ್ಭದಲ್ಲಿ ಸಚಿವ ಎನ್‌ಎಸ್ ಬೋಸರಾಜ್, ಶಾಸಕರಾದ ಕರೆಮ್ಮ ಗೋಪಾಲಕೃಷ್ಣ, ಬಸನಗೌಡ ದದ್ದಲ್, ರಾಜಾವೇಣುಗೋಪಾಲ ನಾಯಕ, ಎಂಎಲ್ಸಿ ಶರಣಗೌಡ ಬಯ್ಯಾಪೂರು, ಮಾಜಿ ಶಾಸಕ ಕೆ.ಶಿವನಗೌಡ ನಾಯಕ, ವೆಂಕಟರಾವ್ ನಾಡಗೌಡ, ಮಾಜಿ ಸಂಸದ ಕೆ.ವಿರುಪಾಕ್ಷಿಪ್ಪ, ನಿವೃತ್ತ ಕುಲಪತಿ ಡಾ.ಮಲ್ಲಿಕ್ ಘಂಟಿ, ನಾಗೇಂದ್ರ ಕುಮಾರ, ಪ್ರತಾಪಗೌಡ ಪಾಟೀಲ್ ಸೇರಿದಂತೆ ಗಣ್ಯಾತಿಗಣ್ಯರು ಹಾಗೂ ಹಾಲುಮತ ಸಮಾಜದ ಮುಖಂಡರು ಸೇರಿದಂತೆ ಇತರರು ಇದ್ದರು.

ದೇಶದ ಅನ್ನದಾತರ ಬೆನ್ನಲುಬು ಮುರಿದ ಕೇಂದ್ರ ಸರ್ಕಾರ : ಮುಜಾಹಿದ್ ಮರ್ಚೆಡ್

ರಾಯಚೂರು ಫೆ.01

ರಾಯಚೂರು: ಕೇಂದ್ರ ಸರ್ಕಾರ ಮಂಡಿಸಿರುವ 202627ರ ಕೇಂದ್ರ ಬಜೆಟ್ ರೈತ ವಿರೋಧಿ ಬಜೆಟ್ ಆಗಿದ್ದು, ದೇಶದ ಬೆನ್ನೆಲುಬಾದ ಅನ್ನದಾತರ ಬೆನ್ನೆಲುಬನ್ನೆ ಮುರಿದು ಸಂಕಷ್ಟಕ್ಕೆ ತಳ್ಳುವಂತಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ (ರಿ.) ರಾಯಚೂರು ಜಿಲ್ಲಾ ಕಾರ್ಯಾಧ್ಯಕ್ಷರಾದ ಮುಜಾಹಿದ್ ಮರ್ಚೆಡ್ ಅವರು ತೀವ್ರವಾಗಿ ಖಂಡಿಸಿದ್ದಾರೆ.



ಬಜೆಟ್ ನಂತರ ಮಾತನಾಡಿದ ಅವರು, ಆಹಾರ ಧಾನ್ಯ ಸಬ್ಸಿಡಿ ಹಾಗೂ ಗೊಬ್ಬರ ಸಬ್ಸಿಡಿಯಲ್ಲಿ ಕಡಿತ, ಕೃಷಿ ಕ್ಷೇತ್ರಕ್ಕೆ ಅಪರ್ಯಾಪ್ತ ನಿಧಿ ಹಂಚಿಕೆ ಮಾಡಿರುವುದರಿಂದ ರೈತರ ಮೇಲಿನ ಆರ್ಥಿಕ ಒತ್ತಡ ಇನ್ನಷ್ಟು ಹೆಚ್ಚಲಿದೆ. ಗೊಬ್ಬರ ಸಬ್ಸಿಡಿ ಕಡಿತದಿಂದ ನೇರವಾಗಿ ಗೊಬ್ಬರ ಬೆಲೆ ಏರಿಕೆಯ ಆತಂಕ ಎದುರಾಗಿದ್ದು, ಇದು ಸಣ್ಣ ಹಾಗೂ ಅಂಚಿನ ರೈತರ ಬದುಕಿಗೆ ದೊಡ್ಡ ಹೊಡೆತ ನೀಡಲಿದೆ ಎಂದು ಮುಜಾಹಿದ್ ಮರ್ಚೆಡ್ ಹೇಳಿದರು.

ರೈತರ ಆದಾಯವನ್ನು ದುಪ್ಪಟ್ಟು ಮಾಡುವ ಭರವಸೆ, ಕನಿಷ್ಠ ಬೆಂಬಲ ಬೆಲೆ ()ಗೆ ಕಾನೂನು ಖಾತರಿ, -ಕಿಸಾನ್ ಯೋಜನೆಯಲ್ಲಿ ವಾರ್ಷಿಕ ರೂ.12,000.

00 ನೆರವು ನೀಡುವಂತಹ ಪ್ರಮುಖ ಬೇಡಿಕೆಗಳನ್ನು ಈ ಬಜೆಟ್ ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ತೆಂಗಿನಕಾಯಿ ಯೋಜನೆಯಂತಹ ಸಣ್ಣ ಘೋಷಣೆಗಳು ಕೇವಲ ಕಣ್ಣು ಮುಚ್ಚಿ ಬಾಯಿ ತುಂಬಿಸುವ ಪ್ರಯತ್ನಗಳಷ್ಟೇ ಎಂದು ಅವರು ಟೀಕಿಸಿದರು.

ಈ ಬಜೆಟ್ ರೈತರನ್ನು ಇನ್ನಷ್ಟು ದಾರಿದ್ರ್ಯಕ್ಕೆ ತಳ್ಳುವಂತಿದ್ದು, ಕೇಂದ್ರ ಸರ್ಕಾರ ಈ ರೈತ ವಿರೋಧಿ ಬಜೆಟ್ ಅನ್ನು ತಕ್ಷಣ ಹಿಂಪಡೆಯಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ (ರಿ.) ಒತ್ತಾಯಿಸುತ್ತದೆ. ರೈತರ ಹಕ್ಕುಗಳ ರಕ್ಷಣೆಗಾಗಿ ರಾಜ್ಯದಾದ್ಯಂತ ಜನತೆ ಒಗ್ಗೂಡಿ ಹೋರಾಟಕ್ಕೆ ಮುಂದಾಗಬೇಕೆಂದು ಮುಜಾಹಿದ್ ಮರ್ಚೆಡ್ ಅವರು ಕರೆ ನೀಡಿದರು.

907ನೇ ಶರಣ ಶ್ರೀ ಮಡಿವಾಳ ಮಾಚಿದೇವರ ಜಯಂತಿ



ಸಿರುಗುಪ್ಪ,ಫೆ.02-

ಶರಣರು ನುಡಿದಂತೆ ನಡೆದು ತೋರಿಸಿದವರು ನುಡಿದಂತೆ ನಡೆ ಅದೇ ಜನ್ಮ ಕಡೆ ಎನ್ನುವಂತೆ ಬದುಕಿ ತೋರಿಸಿದ ಶ್ರೇಷ್ಠ ಶರಣರಲ್ಲಿ ಮಾಚಯ್ಯನವರು ಒಬ್ಬರು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಕೆ ಮಲ್ಲಿಕಾರ್ಜುನ ಅವರು ಹೇಳಿದರು ಸಿರುಗುಪ್ಪ ನಗರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿ ಕಚೇರಿಯ ಸಭಾಭವನದಲ್ಲಿ ಕರ್ನಾಟಕ ಸರ್ಕಾರ ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್ ತಾಲೂಕ ಆಡಳಿತ ತಾಲೂಕು ಪಂಚಾಯತ್ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಭಾಗಿತ್ವದಲ್ಲಿ 907ನೇ ಶರಣ ಶ್ರೀ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮದಲ್ಲಿ ಮಡಿವಾಳ ಮಾಚಿದೇವ ಭಾವಚಿತ್ರಕ್ಕೆ ಮಾಲಾರ್ಪಣೆ ಪುಷ್ಪ ಸಮರ್ಪಿಸಿ ನಮನ ಸಲ್ಲಿಸಿದ ತಾಲೂಕ ಕಚೇರಿಯ ಉಪ ತಹಶೀಲ್ದಾರ್ ಸಿದ್ದಾರ್ಥ ಕಾರಂಜಿ ಅವರು ಮಾತನಾಡಿ ಬಿಜಾಪುರ ಜಿಲ್ಲೆಯ ಸಿಂಧಗಿ ತಾಲೂಕಿನ ದೇವರ ಹಿಪ್ಪರಗಿಯಲ್ಲಿ ಪರುವತಯ್ಯ ಸುಜ್ಞಾನವ್ವ ದಂಪತಿಗಳ ಪುತ್ರ ರತ್ನ ಶರಣ ಕಿರಣ ಮಡಿವಾಳ ಮಾಚಿದೇವರು ಜನಿಸಿದ್ದು ಕ್ರಿ. ಶ 1120-1130 ರ ನಡುವೆ ಅವರ ವಚನ ಸಾಹಿತ್ಯ ರಕ್ಷಕ ವೀರಶರಣ ಮಡಿವಾಳ ಮಾಚಿದೇವರು ಎಂದು ಅವರು ವಿವರಿಸಿ ಮಾತನಾಡಿದರು ಮಡಿವಾಳ ಸಮಾಜದ ತಾಲೂಕ ಅಧ್ಯಕ್ಷರು ಉಪಾಧ್ಯಕ್ಷರು ಪದಾಧಿಕಾರಿಗಳು ಸಮುದಾಯದವರು ತಾಲೂಕ ಮಟ್ಟದ ಎಲ್ಲಾ ಅಧಿಕಾರಿಗಳು ರಾಷ್ಟ್ರೀಯ ಹಬ್ಬಗಳ ಆಚರಣಾ ರಾಷ್ಟ್ರೀಯ ಸಾಕ್ಷರತಾ ಸಮಾಜ ಸುಧಾರಕ ಶಾಂತಿ ಸಭೆ ಸದಸ್ಯ ಅಬ್ದುಲ್ ನಬಿ ಅವರು ಎಲ್ಲಾ ಸಂಘ ಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸಿದ್ದರು.

ಪರಮ ಪೂಜ್ಯ ಶ್ರೀ ಸಿದ್ದರಾಮಾ ನಂದ ಪುರಿ. ಸ್ವಾಮೀಜಿಯವರು ಮಾನವೀಯ ಮೌಲ್ಯಗಳನ್ನು. ಬೆಳೆಸಿದ ಮಹಾನ್ ಸನ್ಯಾಸಿಗಳಾಗಿದ್ದರು. ಕೆ. ಶಿವನಗೌಡ ನಾಯಕ್



ದೇವದುರ್ಗ,ಫೆ.02-

1-2-2026. ಶ್ರೀ ಕಾಗಿನೆಲೆ ಮಹಾ ಸಂಸ್ಥಾನ. ಕನಕ ಗುರು ಪೀಠ. ತಿಂಥಿನಿ ಬ್ರಿಜ್ ವತಿಯಿಂದ. ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ತಿಂಥಿ ಣಿ. ಬ್ರಿಜ್ ಶಾಖ ಮಠದಲ್ಲಿ. ಆಯೋಜಿಸಲಾದ ಪರಮಪೂಜ್ಯಶ್ರೀ ಸಿದ್ದ ರಾಮಾ ನಂದಪೂರಿ. ಸ್ವಾಮೀಜಿಯವರ ಪುಣ್ಯರಾಜನೇ ಹಾಗೂ ನೋಡಿ ನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು. ಮಾಜಿ ಸಚಿವರಾದ ಶ್ರೀ ಕೆ ಶಿವನಗೌಡ ಅವರು. ಶ್ರೀಗಳ ಮಹತ್ವದ ಧಾರ್ಮಿಕ ಹಾಗೂ ಸಾಮಾಜಿಕ ಸೇವೆಯನ್ನು. ಸ್ಮರಿಸಿದರು. ಪರಮಪೂಜ್ಯ ಶ್ರೀ ಸಿದ್ದರಾಮನಂದ ಪೂರಿ. ಸ್ವಾಮೀಜಿಯವರು. ಸಮಾಜದಲ್ಲಿ ಧಾರ್ಮಿಕ ಜಾಗೃತಿ ಮಾನವೀಯ ಮೌಲ್ಯಗಳು ಹಾಗೂ ಸೇವಾ ಮನೋಭಾವ. ಬೆಳೆಸಿದ ಮಹಾನ್ ಸನ್ಯಾಸಿಗಳಾಗಿ ಸದಾ ಸ್ಮರಣೀಯ. ಅವರ ಆಶಯಗಳು ಮತ್ತು ಆದರ್ಶಗಳು ನಮ್ಮ ಜೀವನದಲ್ಲಿ ದಾರಿದೀಪವಾಗಲಿ ಎಂಬ ಸಂಕಲ್ಪದೊಂದಿಗೆ ಭಕ್ತಿ ಪೂರ್ವಕ ನಮನಗಳನ್ನು ಸಲ್ಲಿಸಿದರು. ಕಾಗಿನೆಲೆ ಮಹಾ ಸಂಸ್ಥಾನ ಕನಕ ಗುರು ಪೀಠದ. ಜಗದ್ಗುರು ಶ್ರೀ ಶ್ರೀ ನಿರಂಜನಾ ನಂದಪುರಿ ಸ್ವಾಮೀಜಿಯವರ ದಿವ್ಯ ಸಾನಿಧ್ಯದಲ್ಲಿ. ನಡೆದ ಈ ಪವಿತ್ರ ಕಾರ್ಯಕ್ರಮವು ಭಕ್ತಿ ಭಾವದಿಂದ ಕೂಡಿದ ವಾತಾವರಣ ದಲ್ಲಿ ನೆರವೇರಿತು. ಈ ಕಾರ್ಯಕ್ರಮದಲ್ಲಿ ಈಶ್ವರಾನಂದ ಪೂರಿ ಸ್ವಾಮೀಜಿ. ಕರ್ನಾಟಕ ರಾಜ್ಯದ.ಮುಖ್ಯಮಂತ್ರಿ ಗಳಾದ ಶ್ರೀ ಸಿದ್ದರಾಮಯ್ಯ. ಅವರು. ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ. ಶ್ರೀ. ಶರಣಪ್ರಕಾಶ್ ಪಾಟೀಲ್. ಸಚಿವರಾದ ಶ್ರೀ ಎನ್ ಎಸ್ ಬೋಸರಾಜು. ಶಿವರಾಜ್ ತಂಗಡಗಿ. ಶರಣಬಸಪ್ಪ ದರ್ಶನಾಪು.ರ್ ಬಂಡಪ್ಪ ಕಾಶಂಪುರೆ. ವೆಂಕಟರಾವ್ ನಾಡಗೌಡ.. ರಾಜ ವೇಣುಗೋಪಾಲ್ ನಾಯಕ್. ಜಿ ಕರೆಮ್ಮ ನಾಯಕ್ . ಮಾಜಿ ಲೋಕಸಭಾ ಸದಸ್ಯರಾದ ಶ್ರೀ.ಕೆ.ವಿರೂಪಾಕ್ಷಪ್ಪ. ಶಾಸಕರಾದ.ಭೀಮಸೇನ್ ಚಿಮ್ಮನಕಟ್ಟಿ. ಸೇರಿದಂತೆ. ಅನೇಕ ಜನಪ್ರತಿನಿಧಿಗಳು. ಮುಖಂಡರುಗಳು. ಹಾಗೂ ವಿವಿಧ ಮಠಗಳ. ಗೌರವಾನ್ವಿತ ಸ್ವಾಮೀಜಿಗಳು ಈ ಕಾರ್ಯಕ್ರಮದ ವೇದಿಕೆಯಲ್ಲಿದ್ದರು.

ರಾರಾವಿ ಸಂಭ್ರಮದ ಹುತ್ತಿನ ಯಲ್ಲಮ್ಮ ದೇವಿ ಜಾತ್ರಾ ಮಹೋತ್ಸವ

ಸಿರುಗುಪ್ಪ,ಫೆ.02-



ತಾಲೂಕು ರಾರಾವಿ ಗ್ರಾಮದ ವೇದಾವತಿ ಹಗರಿ ನದಿ ತೀರದ ಪಂಜತನ್ ಔಲಿಯಾ ದರ್ಗಾ ಬಳಿಯ ಹತ್ತಿರ ಇರುವ ಹುತ್ತಿನ ಯಲ್ಲಮ್ಮ ದೇವಿ 93ನೇ ಮಹಾ ಜಾತ್ರಾ ಉತ್ಸವ ಅದ್ದೂರಿಯಾಗಿ ಜರುಗಿತು ಯಲ್ಲಮ್ಮ ದೇವಿಯ ಉತ್ಸವ ಮೂರ್ತಿ ಪಲ್ಲಕ್ಕಿ ಸೇವೆ ಮೇಕಿ ಕುಂಭ ಸಕಲ ಭಕ್ತರಿಂದ ಹೂವಿನ ರಥೋತ್ಸವ ದೈವ ಕುಂಭೋತ್ಸವ ಆದಿಶಕ್ತಿ ಗೆ ಅಭಿಷೇಕ ಚಿನ್ನ ಭರಣಗಳಿಂದ ವಿವಿಧ ಪುಷ್ಪಗಳಿಂದ ವಿಶೇಷ ಅಲಂಕಾರದಿಂದ ಮಹಾಮಂಗಳಾರತಿ ಮಾಡಲಾಯಿತು ಸಂಜೆ ಜಾತ್ರಾ ಮಹಾ ರಥೋತ್ಸವ ವಿಜೃಂಭಣೆಯಿಂದ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು ಭಕ್ತರು ಹೂ ಹಣ್ಣು ಎಸೆದು ಭಕ್ತಿ ಸಮರ್ಪಿಸಿದರು ಐದು ದಿನದವರೆಗೆ ಜಾತ್ರೋತ್ಸವ ನಡೆಯುವುದು ರಾಜ್ಯದ ವಿವಿಧ ಜಿಲ್ಲೆಗಳ ಹಾಗೂ ಆಂಧ್ರಪ್ರದೇಶದ ಸುತ್ತಮುತ್ತ ಸಾವಿರಾರು ಭಕ್ತರು ಟ್ರಾಕ್ಟರ್ ವಾಹನ ಎತ್ತಿನ ಬಂಡಿ ಬಸ್ ಆಟೋ ಬೈಕ್ ಮೂಲಕ ಪಾಲ್ಗೊಂಡಿದ್ದರು ದರ್ಶನ ಪಡೆದರು.

ಮಡಿವಾಳ ಮಾಚಿದೇವರು 12ನೆಯ ಶತಮಾನದ ಅಪ್ರತಿಮ ಶರಣರು-ಸಚಿವ ಈಶ್ವರ ಬಿ.ಖಂಡ್ರೆ



ಬೀದರ, ಫೆ.02-

ಮಡಿವಾಳ ಮಾಚಿದೇವರು 12ನೆಯ ಶತಮಾನದ ಅಪ್ರತಿಮ ಶರಣರು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ಅವರು ರವಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಇವರ ಸಂಯುಕ್ತಾಶ್ರದಲ್ಲಿ ಪೂಜ್ಯ ಡಾ. ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ಆಯೋಜಿಸಿದ ಶ್ರೀ ಮಡಿವಾಳ ಮಾಚಿದೇವರು ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಾಚಿದೇವರು ಜನರ, ಸಮಾಜದ ಮನೆ-ಮನಗಳನ್ನು ಶುಚಿಗೊಳಿಸುವ ಕಾಯಕದಲ್ಲಿ ನಿರತರಾದವರು, ಅವರು ಕೇವಲ ಬಟ್ಟೆಯ ಕೊಳಕನ್ನು ತೊಳೆಯದೆ ಸಮಾಜದಲ್ಲಿರುವ ಮೌಢ್ಯತೆ, ಕಂದಾಚಾರ, ವರ್ಣಭೇದಗಳಂತಹ ಕೊಳಕನ್ನು ತೊಳೆಯಲು ಹೊರಾಟ ನಡೆಸಿದ ಶ್ರೇಷ್ಠ ಶರಣರು. ಬಸವಣ್ಣನವರ ನೇತೃತ್ವದಲ್ಲಿ ಸರ್ವ ಸಮಾನತೆಗಾಗಿ ಕಲ್ಯಾಣದಲ್ಲಿ ನಡೆದ ಕ್ರಾಂತಿಯಲ್ಲಿ ಮುಂಚುಣಿಯಲ್ಲಿದ್ದ ಶರಣರಲ್ಲಿ ಮಾಚಿದೇವರು ಸಹ ಒಬ್ಬರು. ತಮ್ಮ ವೃತ್ತಿಯ ಬಗ್ಗೆ ಅಪಾರ ಗೌರವ ಹೊಂದಿದ ಅವರು ''ಅಗಸತನ ಕೀಳಲ್ಲ, ಅರಸತನ ಶ್ರೇಷ್ಠವಲ್ಲ'' ಎನ್ನುತ್ತಿದ್ದರು ಎಂದು ಹೇಳಿದರು.

ಮಡಿವಾಳ ಸಮಾಜ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಇನ್ನು ಪ್ರಗತಿ ಸಾದಿಸಬೇಕಿದೆ. ಸಮಾಜದ ಕುಲಕಸುಬಿಗೆ ಬೇಕಾಗುವ ಸೌಲಭ್ಯಗಳ ಈಡೇರಿಕೆಗೆ ಪ್ರಯತ್ನಿಸಲಾಗುವುದು. ಭವನ ನಿರ್ಮಾಣಕ್ಕೆ ಸಮಾಜದ ಬಾಂಧವರು ಬೇಡಿಕೆ ಇಟ್ಟಿದ್ದಾರೆ, ಮುಂದಿನ ದಿನಗಳಲ್ಲಿ ಅವರ ಬೇಡಿಕೆಯಂತೆ ಭವನಕ್ಕಾಗಿ ನಿವೇಶನ ಹಾಗೂ ಕಟ್ಟಡ ನಿರ್ಮಾಣಕ್ಕಾಗಿ ಅನುಧಾನ ನೀಡುವುದಾಗಿ ಭರವಸೆ ಸಚಿವರು ನೀಡಿದರು.

ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಮಾತನಾಡಿ, ಎಲ್ಲಾ ಮಹಾಪುರುಷರನ್ನು ಕೇವಲ ಜಯಂತಿಗಳಿಗೆ ಸೀಮಿತಗೊಳಿಸದೆ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಎಲ್ಲರು ಸಾಗಬೇಕು. ತಂತ್ರಜ್ಞಾನ ಅಭಿವೃದ್ಧಿಯಿಂದ ಕುಲಕಸುಬುಗಳು ಅಳಿವಿನಂಚಿನಲ್ಲಿವೆ. ನೀವು ಮಾಡಿದ ಕೆಲಸ ನಿಮ್ಮ ಮಕ್ಕಳು ಮಾಡಲಾರರು, ಆದ್ದರಿಂದ ಎಲ್ಲರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು.

ಮಡಿವಾಳ ಸಮಾಜದ ಅಭಿವೃದ್ಧಿಗಾಗಿ ಮಡಿವಾಳ ಮಾಚಿದೇವರ ಅಭಿವೃದ್ಧಿ ನಿಗಮ ಸ್ಥಾಪಿಸಿ ಅದಕ್ಕೆ ಅಧ್ಯಕ್ಷರನ್ನು ನೇಮಕ ಮಾಡಲಾಗಿದೆ. ಎಲ್ಲರು ಈ ಅಭಿವೃದ್ಧಿ ನಿಗಮದ ಲಾಭ ಪಡೆಯಬೇಕೆಂದರು.

ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ನಿವೃತ್ತ ಪ್ರಾಚಾರ್ಯ ಡಾ. ಶಿವಶರಣಪ್ಪಾ ಹುಗ್ಗಿ ಪಾಟೀಲ್, ಮಡಿವಾಳ ಮಾಚಿದೇವರು ಎಂದರೆ ಶಕ್ತಿಯ ಪ್ರತೀಕ, ಎಲ್ಲಾ ಶರಣರನ್ನು ಹಾಗೂ ವಚನ ಸಾಹಿತ್ಯವನ್ನು ಸಂರಕ್ಷಿಸಿದ ಶ್ರೇಯಸ್ಸು ಮಾಚಿದೇವರಿಗೆ ಸಲ್ಲುತ್ತದೆ. ಕರ್ನಾಟಕದಲ್ಲಿ ಮೊದಲ ಬಾರಿಗೆ ಮಡಿವಾಳ ಮಾಚಿದೇವರ ಜಯಂತಿಯನ್ನು ಆಚರಣೆ ಮಾಡಿದ ಕಿರ್ತಿ ಭಾಲ್ಕಿಯ ಪಟ್ಟದೇವರಿಗೆ ಹಾಗೂ ಲೋಕನಾಯಕ ಭೀಮಣ್ಣ ಖಂಡ್ರೆಯವರಿಗೆ ಸಲ್ಲಿದರೆ, ಭವನ ನಿರ್ಮಾಣದ ಕಿರ್ತಿ ವಿಜಯಕುಮಾರ ಖಂಡ್ರೆಯವರಿಗೆ ಸಲ್ಲುತ್ತದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಮಡಿವಾಳ ಮಾಚಿದೇವರ ಭಾವಚಿತ್ರದ ಮೆರವಣಿಗೆ ಅದ್ದೂರಿಯಾಗಿ ಜರುಗಿತು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜಶೇಖರ ವಟಗೆ, ಮಡಿವಾಳ ಸಮಾಜದ ಕಲಬುರ್ಗಿ ವಲಯ ಕಾರ್ಯಾಧ್ಯಕ್ಷ ದಿಗಂಬರ ಮಡಿವಾಳ, ಮಡಿವಾಳ ಸಮಾಜದ ಬೀದರ ಗೌರವಾಧ್ಯಕ್ಷ ಬಾಬುರಾವ ಮಡಿವಾಳ, ಜಿಲ್ಲಾಧ್ಯಕ್ಷ ಸುಭಾಷ ಮಡಿವಾಳ, ಉಪಾಧ್ಯಕ್ಷ ಶ್ರೀನಿವಾಸ ಚೌಧರಿ, ಪ್ರಧಾನ ಕಾರ್ಯದರ್ಶಿ ಶಿವಕುಮಾರ ಕಂದಗುಳ್, ಮಹೇಶ ಮಡಿವಾಳ ಸೇರಿದಂತೆ ಇತರರು ಉಪಸ್ಥತರಿದ್ದರು.

ವಚನ ಸಾಹಿತ್ಯ ರಕ್ಷಣೆ ನಮ್ಮೆಲ್ಲರ ಹೊಣೆ

ಕಲಬುರಗಿ,ಫೆ.01-



ಸಮಾಜದ ಅನೇಕ ಜ್ವಲಂತ ಸಮಸ್ಯೆಗಳಿಗೆ ವಚನ ಸಾಹಿತ್ಯವು ದಾರಿದೀಪವಾಗಿದೆ. ಇಂತಹ ಅಮೂಲ್ಯವಾದ ವಚನ ಸಾಹಿತ್ಯವನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ತಲುಪಿಸುವ ಕಾರ್ಯವಾಗಬೇಕು ಎಂದು ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಹೇಳಿದರು.

ರವಿವಾರದಂದು ಡಾ. ಎಸ್. ಎಂ. ಪಂಡಿತ ರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಲಬುರ್ಗಿ ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಕಲಬುರ್ಗಿ ಹಾಗೂ ಶ್ರೀ ಮಡಿವಾಳ ಮಾಚಿದೇವರ ಜಯಂತೋತ್ಸವ ಸಮಿತಿ ಕಲ್ಬುರ್ಗಿ ಇವರ ಸಂಯುಕ್ತ ಆಶ್ರಯದಲ್ಲಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದರು.

12ನೇ ಶತಮಾನದಲ್ಲಿ ವಚನ ಸಾಹಿತ್ಯದ ರಕ್ಷಣೆಗೆ ಮಡಿವಾಳ ಮಾಚಿದೇವ ನೀಡಿದ ಕೊಡುಗೆ ಅಪಾರ. ಕಾಯಕವೇ ಕೈಲಾಸ ಎಂದು ನಂಬಿದ್ದ ಅವರು, ಶರಣರ ಬಟ್ಟೆಗಳನ್ನು ಮಡಿ ಮಾಡುವ ಕಾಯಕದ ಮೂಲಕವೇ ಸಮಾಜಕ್ಕೆ ದೊಡ್ಡ ಸಂದೇಶ ನೀಡಿದ್ದಾರೆ ಎಂದು ಹೇಳಿದರು.

ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಹೂಗಾರ ಮಾದಯ್ಯ ಸೇರಿದಂತೆ ಹನ್ನೆರಡನೇ ಶತಮಾನದ ಎಲ್ಲಾ ಶರಣರು ತಮ್ಮ ತಮ್ಮ ಕಾಯಕದ ಮೂಲಕ ಸಮಾಜದ ಏಳಿಗೆಗಾಗಿ ಶ್ರಮಿಸಿದ್ದಾರೆ. ಅವರ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕಿದೆ. ಬುದ್ಧ, ಬಸವಣ್ಣನವರಿಂದ ಹಿಡಿದು ಡಾ. ಬಿ.ಆರ್. ಅಂಬೇಡ್ಕರ್ ವರೆಗೆ ಎಲ್ಲರೂ ಸಮಾನತೆಗಾಗಿ ಹೋರಾಡಿದ್ದಾರೆ. ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ನಮಗೆಲ್ಲರಿಗೂ ಹಕ್ಕುಗಳನ್ನು ನೀಡಿದ್ದಾರೆ ಎಂದು ತಿಳಿಸಿದರು.

ಜಯಂತಿ ಎನ್ನುವುದು ಕೇವಲ ಆಚರಣೆಯಾಗಬಾರದು, ಮಹಾಪುರುಷರ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪವಾಗಬೇಕು ಎಂದು ಅವರು ಹೇಳಿದರು.ಮಡಿವಾಳ ಮಾಚಿದೇವರು 12 ನೇ ಶತಮಾನದ ಅನೇಕ ಶರಣರು ತಮ್ಮ ಕಾಯಕದ ಮೂಲಕ ಗುರುತಿಸಿಕೊಂಡಿದ್ದರು ಎಂದು ದಕ್ಷಿಣ ಮತಕ್ಷೇತ್ರದ ಶಾಸಕರಾದ ಅಲ್ಲಮಪ್ರಭು ಪಾಟೀಲ ಹೇಳಿದರು.

ಪ್ರಾಧ್ಯಾಪಕರು ಪಿಡಿಎ ಇಂಜಿನಿಯರಿಂಗ್ ಕಾಲೇಜ್ ಶ್ರೀ ಸಂಜಯ್ ಮಾಕಲ್ ಉಪನ್ಯಾಸಕರು ವಿಶೇಷ ಉಪನ್ಯಾಸ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕ ಜಗದೀಶ್ವರಿ ಅ ನಾಸಿ ಅವರು ಸ್ವಾಗತಿಸಿದರು. ಶ್ರೀನಿವಾಸ ಸರಡಗಿ, ತಾಜ ಸುಲ್ತಾನಪೂರ ಹಾಗೂ ಕುರಿಕೋಟ ಪೂಜೆ ಶ್ರೀ. ಷ. ಬ್ರ ಡಾ: ರೇವಣಸಿದ್ದ ಶಿವಾಚಾರ್ಯರು ದಿವ್ಯ ಸಾನ್ನಧ್ಯ ವಹಿಸಿ ಮಾತನಾಡಿದರು.

ಇದಕ್ಕೂ ಮುನ್ನ ಬೆಳಿಗ್ಗೆ 8 ಗಂಟೆಗೆ ಹುಮ್ನಾಬಾದ್ ವರ್ತುಲ ರಸ್ತೆಯಲ್ಲಿರುವ ಮಾಚಿದೇವರ ವೃತದಲ್ಲಿ ಕತೃಗದ್ದಿಗೆ ಪೂಜೆ ಶ್ರೀ. ಷ. ಬ್ರ ಡಾ: ರೇವಣಸಿದ್ದ ಶಿವಾಚಾರ್ಯರು ಚಿನ್ನದ ಕಂತಿ ಚಿಕ್ಕವಿರೇಶ್ವರ ಸಂಸ್ಥಾನ ಹಿರೇಮಠ ಶ್ರೀನಿವಾಸರಡಗಿ ಹಾಗೂ ತಾಜಸುಲ್ತಾನ್ ಪುರ್ ಅವರು ದಿವ್ಯ ಸಾನಿಧ್ಯದಲ್ಲಿ ನೆರವೇರಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷರಾದ ಶ್ರೀ ವಿಜಯಕುಮಾರ್ ಪಾಟೀಲ್ ತೆಗಲತಿಪ್ಪಿ ಮಡಿವಾಳ ಸಮಾಜ ಜಿಲ್ಲಾಧ್ಯಕ್ಷರಾದ ರವಿಕುಮಾರ ಶಹಾಪೂರಕರ್ ಗೌರವಾಧ್ಯಕ್ಷರು ಶಿವಪುತ್ರ ಮಲ್ಲಾಭಾಕರ್ ಕಾರ್ಯದರ್ಶಿ ಶಾಂತಕುಮಾರ್ ಕಣ್ಣೂರ್ ಉಪಾಧ್ಯಕ್ಷರು ಚಂದ್ರಶೇಖರ್ ಲಿಂಗಪ್ಪ ಮಡಿವಾಳ್ ಸಂಜು ಮಡಿವಾಳ ಗಂಗಾಧರ್ ಮಡಿವಾಳ ಸೂರ್ಯಕಾಂತ್ ಮಡಿವಾಳ್ ಸೇರಿದಂತೆ ಅನೇಕ ಸಮಾಜ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಿರುಗುಪ್ಪ :ಕರ್ನಾಟಕ ಪತ್ರಕರ್ತರ ಸಂಘದಿಂದ ಉಚಿತ ನೇತ್ರ ತಪಾಸಣೆ

ಸಿರುಗುಪ್ಪ,ಫೆ.02-

45 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರು ಆರೋಗ್ಯದ ಹಿತದೃಷ್ಟಿಯಿಂದ ಕಡ್ಡಾಯವಾಗಿ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳಬೇಕು ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂಎಸ್ ಸೋಮಲಿಂಗಪ್ಪ ಅವರು ಹೇಳಿದರು ಸಿರುಗುಪ್ಪ ನಗರದ ಸಾರ್ವಜನಿಕ ಆಸ್ಪತ್ರೆ ಮೈದಾನದಲ್ಲಿ ಕರ್ನಾಟಕ ಸರ್ಕಾರ ಕರ್ನಾಟಕ ಪತ್ರಕರ್ತರ ಸಂಘ ಶಿವಮೊಗ್ಗ ಶಂಕರ ಕಣ್ಣಿನ ಆಸ್ಪತ್ರೆ ಹರಕೆರೆ ಬಳ್ಳಾರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ ಬಳ್ಳಾರಿ ಜಿಲ್ಲಾ ಅಂಧತ್ವ ನಿಯಂತ್ರಣ ಕಾರ್ಯಕ್ರಮ ಸಿರುಗುಪ್ಪ ಸಾರ್ವಜನಿಕ ಆಸ್ಪತ್ರೆ ತಾಲೂಕು ಆರೋಗ್ಯ ಅಧಿಕಾರಿಗಳು ಕಚೇರಿಯ ಸಿರುಗುಪ್ಪ ಇವರ ಸಹಭಾಗಿತ್ವದಲ್ಲಿ ಉಚಿತ ನೇತ್ರ ತಪಾಸಣಾ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ ಹಸಿರು ಸಸಿಗೆ ನೀರು ಎರೆಯುವ ಮೂಲಕ ಉದ್ಘಾಟಿಸಿ ಮಾತನಾಡುತ್ತಾ ಆರ್ಥಿಕವಾಗಿ ಹಿಂದುಳಿದಿರುವ ಬಡ ಜನರಿಗೆ ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸೆ ಇದರ ಸದುಪಯೋಗವನ್ನು ಪ್ರತಿಯೊಬ್ಬರು ಪಡೆದುಕೊಳ್ಳಬೇಕು ಪತ್ರಕರ್ತರ ಸಮಾಜ ಸೇವೆ ಶ್ಲಾಘನೀಯ ಮೆಚ್ಚುಗೆ ವ್ಯಕ್ತಪಡಿಸಿ ಅವರು ಕರೆ ನೀಡಿದರು ಸರ್ಕಾರಿ ಸಾರ್ವಜನಿಕ ತಾಲೂಕು ಆಸ್ಪತ್ರೆಯ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಹೆಚ್ ಭೀಮರಾಜ ರೆಡ್ಡಿ ಆರೋಗ್ಯ ಏನ್ ಸಿ ಡಿ ವಿಭಾಗದ ಅಪ್ತ ಸಮ ಲೋಚಕ ರಾದ ಕೆ ಮಲ್ಲೇಶಪ್ಪ ಶಿವಮೊಗ್ಗ ಶಂಕರ ಕಣ್ಣಿನ ಆಸ್ಪತ್ರೆ ಯ ಶಿವಪ್ರಕಾಶ್ ಅವರು ಮಾತನಾಡಿ ಕಣ್ಣಿನ ತೊಂದರೆಗಳಿಗೆ ಚಿಕಿತ್ಸೆ ನೀಡಲಾಗುತ್ತದೆ ಆರೋಗ್ಯದ ಕುರಿತು ಅವರು ಮಾತನಾಡಿದರು ಬಳ್ಳಾರಿ ಜಿಲ್ಲಾ ಕರ್ನಾಟಕ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ದುರ್ಗೇಶ್ ತಾಲೂಕ ಅಧ್ಯಕ್ಷ ಮಹೆಬೂಬ್ ಬಾಷಾ ಬಿಜೆಪಿ ತಾಲೂಕ ಅಧ್ಯಕ್ಷ ಕುಂಟನಾಳ್ ಮಲ್ಲಿಕಾರ್ಜುನ ನಗರ ಸಭೆ ಮಾಜಿ ಸದಸ್ಯರಾದ ಮೇಕಲಿ ವೀರೇಶಪ್ಪ ವೈ ಡಿ ವೆಂಕಟೇಶ್ ಇಬ್ರಾಹಿಂಪುರ್ ವೀರನಗೌಡ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಮತ್ತಿತರರು ಉಚಿತ ನೇತ್ರ ತಪಾಸಣಾ ಮತ್ತು ಶಸ್ತ್ರ ಚಿಕಿತ್ಸಾ ಗೆ ಬಂದ ಅರ್ಹರು ಕಾಯಿಲೆ ಇರುವವರು ಇದ್ದರು ಗಣ್ಯ ಮಾನ್ಯರಿಗೆ ಗೌರವಿಸಿ ಸನ್ಮಾನಿಸಲಾಯಿತು ಈ ಸಂದರ್ಭದಲ್ಲಿ ಸರ್ವರಿಗೂ ಊಟದ ವ್ಯವಸ್ಥೆ ಮಾಡಲಾಗಿತ್ತು.

ಮೋಳಕೇರಾ ಗ್ರಾಮದಲ್ಲಿ ಆಕಸ್ಮಿಕ ಸ್ಪೋಟ್:
ಗಾಯಾಳುಗಳ ಆರೋಗ್ಯ ವಿಚಾರಿಸಿದ ಸಚಿವ ಈಶ್ವರ ಬಿ.ಖಂಡ್ರೆ

ಬೀದರ, ಫೆ.02-

ಶನಿವಾರ ಹುಮನಾಬಾದ್ ತಾಲೂಕಿನ ಮೋಳಕೇರಾ ಗ್ರಾಮದಲ್ಲಿ ಅಕಸ್ಮಿಕವಾಗಿ ಸಂಭವಿಸಿದ ಸ್ಪೋಟದಲ್ಲಿ ಗಾಯಗೊಂಡು ನಗರದ ಬ್ರಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ 03 ಜನ ಮಕ್ಕಳನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ, ಅವರಿಂದು ಭೇಟಿ ಮಾಡಿ ಗಾಯಾಳುಗಳ ಆರೋಗ್ಯ ವಿಚಾರಿಸಿ ಸಾಂತ್ವಾನ ಹೇಳಿದರು.

ನಂತರ ಮಾತನಾಡಿ, ಸ್ಪೋಟದಲ್ಲಿ ನಾಲ್ವರು ಮಕ್ಕಳು ಸೇರಿದಂತೆ ಒಟ್ಟು ಆರು ಜನ ಗಾಯಗೊಂಡಿದ್ದಾರೆ. 03 ಮಕ್ಕಳನ್ನು ಬ್ರಿಮ್ಸ್ ಆಸ್ಪತ್ರೆಯಲ್ಲಿ, ಇನ್ನೊಬ್ಬ ಅಪ್ರಾಪ್ತನಿಗೆ ಖಾಸಗಿ ಆಸ್ಪತ್ರೆಯಲ್ಲಿ ಹಾಗೂ ಇಬ್ಬರು ವಯಸ್ಕರಿಗೆ ಹೈದ್ರಾಬಾದ ಹಾಗೂ ಸೋಲ್ಲಾಪೂರ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಅವರಿಗೆ ಜಿಲ್ಲಾಡಳಿತದಿಂದ ಉತ್ತಮ ಚಿಕಿತ್ಸೆ ಕೊಡಲಾಗುತ್ತಿದೆ. ಆಸ್ಪತ್ರೆಯ ಸಂಪೂರ್ಣ ವೆಚ್ಚ ಜಿಲ್ಲಾಡಳಿತ ಭರಿಸಲಿದೆ. ಈಗಾಗಲೇ ಆರೋಪಿಗಳನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ.

ಈ ಘಟನೆಯಲ್ಲಿ ಯಾರೇ ಶಾಮಿಲಾಗಿದ್ದರೂ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು. ತನಿಖೆ ಪ್ರಗತಿಯಲ್ಲಿದೆ. ಘಟನೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಎಲ್ಲ ಮಾಹಿತಿ ಹಂಚಿಕೊಂಡಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್, ವಿಧಾನ ಪರಿಷತ್ ಶಾಸಕ ಡಾ.ಚಂದ್ರಶೇಖರ ಬಿ.ಪಾಟೀಲ, ಮಾಜಿ ಶಾಸಕ ರಾಜಶೇಖರ ಬಿ.ಪಾಟೀಲ, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಕೇಂದ್ರ ಬಜೆಟ್‌ನಲ್ಲಿ ರೈತನಿಗೆ ಜಾಗವಿಲ್ಲ, ನೆಪಕ್ಕಾದರೂ ನಾಲಿಗೆಯ ಮೇಲೆ ಬಂದುಹೋಗಲಿಲ್ಲ



ಈ ಬಾರಿಯ ಬಜೆಟ್ ಪ್ರಕಾರ ಗ್ರಾಮ, ರೈತ ಮತ್ತು ಕೃಷಿ ಈಗ ಅಸ್ತಿತ್ವದಲ್ಲೇ ಇಲ್ಲ. ಆಳುವವರ ಹೃದಯದಲ್ಲಿ ಈಗ ರೈತ ಇಲ್ಲ. ನೆಪಕ್ಕಾದರೂ ನಾಲಗೆಯ ಮೇಲೆ ರೈತ ಬಂದುಹೋಗುತ್ತಿಲ್ಲ.

2026-27ರ ಕೇಂದ್ರ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ಹಲವು ಪ್ರಮುಖ ಅನುದಾನಗಳು ಮತ್ತು ಹೊಸ ಯೋಜನೆಗಳನ್ನು ಘೋಷಿಸಲಾಗಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಬಜೆಟ್‌ನಲ್ಲಿ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಿಗೆ ಒಟ್ಟು ಅನುದಾನ 1.62 ಲಕ್ಷ ಕೋಟಿ ನೀಡಲಾಗಿದೆ. ಕಳೆದ ವರ್ಷಕ್ಕಿಂತ ಶೇ 7.12ರಷ್ಟು ಹೆಚ್ಚಿಸಲಾಗಿದೆ.

ದೇಶದಲ್ಲಿ ಕೃಷಿ ಬೆಳವಣಿಗೆಯಲ್ಲಿ ಕುಸಿತವಿದೆ ಎಂದು ಆರ್ಥಿಕ ಸಮೀಕ್ಷೆ ಸೂಚಿಸಿದ ಕೆಲವೇ ದಿನಗಳ ಬಳಿಕ, ಕೇಂದ್ರ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ಕೊಂಚ ಹೆಚ್ಚಳ ಮಾಡಲಾಗಿದೆ. ಇದು ಹಿಂದಿನ ವರ್ಷದ ಹಂಚಿಕೆಗೆ ಹೋಲಿಸಿದರೆ ಸುಮಾರು 3 ಸಾವಿರ ಕೋಟಿ ಅನುದಾನ ಹೆಚ್ಚಳವಾದಂತಾಗಿದೆ.

ಈ ಬಾರಿ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಉತ್ತೇಜನ ನೀಡುವ ಯೋಜನೆಗಳ ಮೂಲಕ ಅನ್ನದಾತರ ಆದಾಯ ಹೆಚ್ಚಿಸುವ ಆಶಯವನ್ನು ಬಜೆಟ್ ಒಳಗೊಂಡಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಅದಕ್ಕೆ ಪೂರಕವಾಗಿ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಉತ್ತಮ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಕೃಷಿ ವಲಯದಲ್ಲಿ ಉದ್ಯಮಶೀಲತೆ ಅಭಿವೃದ್ಧಿಗೆ ಬೆಂಬಲ ನೀಡುವುದಾಗಿ ತಿಳಿಸಿದ್ದಾರೆ. ಅದಕ್ಕೆ ಪೂರಕವಾಗಿ ಹೊಸ ಯೋಜನೆಗಳು ಮತ್ತು ಘೋಷಣೆಗಳತ್ತ ಹೆಚ್ಚಿನ ಗಮನ ಹರಿಸಲಾಗಿದೆ.

ಆ ಹೊಸ ಯೋಜನೆಯ ಫಲವಾಗಿ, ಕೃಷಿ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನವನ್ನು ಮತ್ತಷ್ಟು ಹೆಚ್ಚಿಸಲು ಕೃತಕ ಬುದ್ಧಿಮತ್ತೆ (ಎಐ) ಸಾಧನ ಬಳಸಿಕೊಳ್ಳುವಂತೆ ಪ್ರೋತ್ಸಾ ಹಿಸಲಾಗಿದೆ. ಆ ನಿಟ್ಟಿನಲ್ಲಿ ಭಾರತ್ ವಿಸ್ತಾ-ರ್ ಬಹುಭಾಷಾ ಎಐ ಆಧಾರಿತ ಸಾಧನವನ್ನು ಜಾರಿಗೆ ತರಲಾಗುವುದು. ಇದು ಕೃಷಿ ಪೋರ್ಟಲ್‌ಗಳು ಮತ್ತು ಭಾರತೀಯ ಕೃಷಿ ಸಂಶೋಧನಾ ಮಂಡಳಿ() ಮಾಹಿತಿಯನ್ನು ಸಂಯೋಜಿಸಿ ರೈತರಿಗೆ ಸಲಹೆ ನೀಡುವ, ಉತ್ಪಾದಕತೆ ಹೆಚ್ಚಿಸುವ ಮಾರ್ಗದರ್ಶನ ನೀಡಲಾಗುವುದು. ಇದಕ್ಕಾಗಿ ಸುಮಾರು 150 ಕೋಟಿ ಅನುದಾನವನ್ನು ಎತ್ತಿಡಲಾಗಿದೆ ಎಂದಿದ್ದಾರೆ.

ಜೊತೆಗೆ ತೆಂಗು, ಕೋಕೋ, ಶ್ರೀಗಂಧ, ಬಾದಾಮಿ, ಗೋಡಂಬಿಗಳಂತಹ ಅತಿ ಹೆಚ್ಚು ಮೌಲ್ಯವುಳ್ಳ ಬೆಳೆಗಳನ್ನು ಉತ್ತೇಜಿಸಲು 350 ಕೋಟಿ ವ್ಯಯಿಸಲಾಗುವುದು. ಈ ಬೆಳೆಗಳ ಸ್ವಾವಲಂಬನೆ ಸಾಧಿಸಿ ರಫ್ತಿಗೆ ಉತ್ತೇಜನ ನೀಡಲಾಗುವುದು. ಆ ಮೂಲಕ 2030ರ ವೇಳೆಗೆ ಈ ಉತ್ಪನ್ನಗಳನ್ನು ಜಾಗತಿಕ ಪ್ರಿಮಿಯಂ ಬ್ರ್ಯಾಂಡ್‌ಗಳನ್ನಾಗಿ ಮಾಡುವ ಉದ್ದೇಶ ಹೊಂದಲಾಗಿದೆ ಎಂದಿದ್ದಾರೆ.

ತೆಂಗು ಉತ್ಪಾದನೆ ವಲಯದಲ್ಲಿ ಸ್ಪರ್ಧೆ ಹೆಚ್ಚಿಸುವ ಉದ್ದೇಶದಿಂದ ತೆಂಗು ಉತ್ತೇಜನ ಯೋಜನೆಯನ್ನು ಘೋಷಿಸಲಾಗಿದೆ. ಅತಿ ಹೆಚ್ಚು ತೆಂಗು ಬೆಳೆಯುವ ರಾಜ್ಯಗಳಲ್ಲಿ ಹಳೆಯ ತೆಂಗಿನ ಮರಗಳ ಬದಲು ಹೊಸ ತಳಿಗಳನ್ನು ನೆಡುವುದು ಈ ಯೋಜನೆಯ ಆಶಯವಾಗಿದೆ. ಈ ಮೂಲಕ ಉತ್ಪಾದನೆ ಮತ್ತು ಮೌಲ್ಯವರ್ಧನೆ ಹೆಚ್ಚಿಸುವ ಉದ್ದೇಶವನ್ನು ಹೊಂದಲಾಗಿದೆ. ಭಾರತ ಜಗತ್ತಿನಲ್ಲೇ ಅತಿ ಹೆಚ್ಚು ತೆಂಗು ಬೆಳೆಯುವ ರಾಷ್ಟ್ರ. ಒಂದು ಕೋಟಿ ರೈತರು ಸೇರಿದಂತೆ ಸುಮಾರು ಮೂರು ಕೋಟಿ ಮಂದಿ ತೆಂಗು ಬೆಳೆ ಮೇಲೆ ಅವಲಂಬಿತರಾಗಿದ್ದಾರೆ. ಹಾಗಾಗಿ ಆ ಬೆಳೆಗೆ ಉತ್ತೇಜನ ನೀಡಲು, ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ.

ಇನ್ನು ಮೀನುಗಾರಿಕೆ ಅಭಿವೃದ್ಧಿ ಕುರಿತು 500 ಜಲಾಶಯಗಳ ಸಮಗ್ರ ಅಭಿವೃದ್ಧಿ ಬಗ್ಗೆ ಪ್ರಸ್ತಾಪಿಸಲಾಗಿದೆ. ಮೀನುಗಾರಿಕೆ ಸರಪಳಿ ಬಲಪಡಿಸುವುದು, ಸ್ಟಾರ್ಟಪ್‌ಗಳು, ಮಹಿಳಾ ಗುಂಪುಗಳು ಮತ್ತು ರೈತ ಉತ್ಪಾದಕ ಸಂಘಗಳ ಮೂಲಕ ಮಾರುಕಟ್ಟೆ ಸಂಪರ್ಕ ವಿಸ್ತರಿಸುವ ಕುರಿತ ತಿಳಿಸಲಾಗಿದೆ. ಹಾಗೆಯೇ ಪಶುಸಂಗೋಪನೆ, ಜಾನುವಾರು ಕೃಷಿಕರ ಉತ್ಪಾದಕರ ಸಂಘಟನೆಗಳನ್ನು ಆರಂಭಿಸುವ ಮೂಲಕ ಈ ವಲಯಕ್ಕೆ ಹೊಸ ಸ್ಪರ್ಶ ನೀಡುವುದನ್ನು ಉಲ್ಲೇಖಿಸಲಾಗಿದೆ. ಕ್ರೆಡಿಟ್-ಲಿಂಕ್ಡ್ ಸಬ್ಸಿ ಡಿ ಯೋಜನೆ, ಆಧುನೀಕರಣ, ಏಕೀಕೃತ ಮೌಲ್ಯ ಸರಪಳಿ, ಪಶು ವೈದ್ಯಕೀಯ ಮತ್ತು ಬ್ರೀಡಿಂಗ್ ಸೌಲಭ್ಯಗಳಿಗೆ ಬೆಂಬಲ. ಗ್ರಾಮೀಣ ಉದ್ಯೋಗ ಸೃಷ್ಟಿ ಗುರಿ ಹೊಂದಲಾಗಿದೆ.

ಒಟ್ಟಾರೆ, ದೇಶದ ಕೃಷಿ ಕ್ಷೇತ್ರದಲ್ಲಿ ಸಾಂಪ್ರದಾಯಿಕ ಬೆಳೆಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಉತ್ತೇಜನ ನೀಡುವ ಯೋಜನೆಗಳ ಮೂಲಕ ಅನ್ನದಾತರ ಆದಾಯ ಹೆಚ್ಚಿಸುವ ಆಶಯವನ್ನು ಈ ಬಾರಿಯ ಬಜೆಟ್ ಒಳಗೊಂಡಿದೆ ಎನ್ನುವುದನ್ನು ಭಾರತದ ಸುದ್ದಿ ಮಾಧ್ಯಮಗಳು ಬಹಳ ಉತ್ಸು ಕತೆಯಿಂದ ವರದಿ ಮಾಡಿವೆ. ಕೇಂದ್ರ ಸರ್ಕಾರ ರೈತ ಪರ ಎಂಬುದನ್ನು ಬಿಂಬಿಸಿವೆ. ಅದಕ್ಕೆ ಬೇಕಾದ ಅಂಕಿ-ಅಂಶಗಳನ್ನು ಬಳಸಿಕೊಂಡು ಬಣ್ಣಿಸಿವೆ. ಆದರೆ, ವಸ್ತುಸ್ಥಿತಿ ಅದಕ್ಕೆ ಭಿನ್ನವಾಗಿದೆ.

ಬಹಳ ಮುಖ್ಯವಾಗಿ, ದೇಶದ ರೈತ ಸಾಂಪ್ರದಾಯಿಕ ಬೆಳೆಗಳಿಂದ ಇನ್ನೂ ಬಿಡಿಸಿಕೊಂಡಿಲ್ಲ. ಬಿಡಿಸಿಕೊಂಡು ಭಿನ್ನ ಬೆಳೆಗಳೊಂದಿಗೆ ಬೆಳೆದವನೂ ಅಲ್ಲ. ಅಕಸ್ಮಾತ್ ಬೆಳೆದಿದ್ದರೂ, ಅವರ ಸಂಖ್ಯೆ ತೀರಾ ಕಡಿಮೆ ಇದೆ. ಇವತ್ತಿಗೂ ಯಾವ ಮಣ್ಣಿನಲ್ಲಿ ಯಾವ ಬೆಳೆ ಬೆಳೆಯಬೇಕು, ಯಾವಾಗ ಬೆಳೆಯಬೇಕು, ಎಷ್ಟು ಬೆಳೆಯಬೇಕೆಂಬ ಅರಿವೇ ಇಲ್ಲ. ಎಐ ಬಳಸಿಕೊಂಡು ಬೆಳೆಯುವಲ್ಲಿ ತಂತ್ರಜ್ಞಾನ ಕ್ಷೇತ್ರವೇ ಇನ್ನೂ ತಿಣುಕುತ್ತಿರುವಾಗ, ಕೃಷಿ ಕ್ಷೇತ್ರದಲ್ಲಿ ಎಐ ಬಳಕೆ ಎನ್ನುವುದು ಹಾಸ್ಯಾಸ್ಪದವೆನಿಸುವುದಿಲ್ಲವೇ? ಭವಿಷ್ಯದ ಅಭಿವೃದ್ಧಿಯನ್ನು ಕನ್ನಡಿಯಲ್ಲೇ ಕಾಣಬೇಕಾಗಬಹುದೇ?

ಜೊತೆಗೆ, ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ, ರೈತರ ಸಾಲ ಮನ್ನಾದ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪ ಇಲ್ಲ. ಎಂ.ಎಸ್. ಸ್ವಾಮಿನಾಥನ್ ವರದಿ ಜಾರಿಯ ಬಗ್ಗೆ ಮಾತನಾಡಿಲ್ಲ. ಕೃಷಿ ಸಾಲ ನೀತಿ ಮತ್ತು ಬೆಳೆ ವಿಮೆ ನೀತಿಯ ಕುರಿತ ಹೇಳಿಲ್ಲ. ಖರೀದಿ ಕೇಂದ್ರಗಳ ಆರಂಭಕ್ಕೆ ಕ್ರಮ ಕೈಗೊಂಡಿಲ್ಲ. ಅತಿವೃಷ್ಟಿ, ಮಳೆ ಹಾನಿ ಪರಿಹಾರ ನೀಡುವಾಗ ಎನ್‌ಡಿಆರ್‌ಎಫ್ ಮಾನದಂಡವನ್ನು ವೈಜ್ಞಾನಿಕವಾಗಿ ಬದಲಾಯಿಸಬೇಕು ಎನ್ನುವ ರೈತನ ಕೂಗನ್ನು ಕೇಂದ್ರ ಸರ್ಕಾರ ಕೇಳಿಸಿಕೊಳ್ಳುತ್ತಲೇ ಇಲ್ಲ.

ದೇಶದ ಬೆನ್ನೆಲುಬು ರೈತ, ರೈತರು ಇಲ್ಲದೆ ಭಾರತದ ಅಭಿವೃದ್ಧಿ ಅಸಾಧ್ಯ ಎಂಬುದನ್ನು ಮೊದಲಿನಿಂದಲೂ ಹೇಳಿಕೊಂಡೇ ಬರಲಾಗಿದೆ. ಜೈ ಜವಾನ್ ಜೊತೆಗೆ ಜೈ ಕಿಸಾನ್ ಘೋಷಣೆಯೂ ಇದೆ. ಇದಕ್ಕೆ ಪೂರಕವಾಗಿ ದೇಶದ ಆರ್ಥಿಕತೆಗೆ ಮೊದಲಿನಿಂದ ಕೃಷಿ ವಲಯ ದೊಡ್ಡ ಕೊಡುಗೆ ನೀಡುತ್ತಾ ಬಂದಿದೆ. ಹೀಗಿದ್ದಾಗ್ಯೂ ದೇಶದ ರೈತರ ಆದಾಯವು ವರ್ಷದಿಂದ ವರ್ಷಕ್ಕೆ ಇಳಿಕೆಯಾಗುತ್ತಿದೆ ಹಾಗೂ ಆತ್ಮಹತ್ಯೆಗಳ ಸಂಖ್ಯೆ ಏರಿಕೆಯಾಗುತ್ತಲೇ ಇದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ(ಎನ್‌ಸಿಆರ್‌ಬಿ) ಪ್ರಕಾರ, ಮೋದಿಯವರು ಪ್ರಧಾನಮಂತ್ರಿಗಳಾದ ನಂತರ, 2014ರಿಂದ 2023ರವರೆಗೆ 1,10,000 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ದೇಶದ ಕೃಷಿ, ಕೃಷಿಕರು ಮತ್ತವರ ಕಷ್ಟ-ನಷ್ಟಗಳ ಕುರಿತು ಗಂಭೀರವಾಗಿ ಚಿಂತಿಸುವ, ತರ್ಕಬದ್ಧ ವಿಚಾರ ಮಂಡಿಸುವ ಯೋಗೇಂದ್ರ ಯಾದವ್ ಅವರು ಕೇಂದ್ರದ ಕೃಷಿ ಬಜೆಟ್ ಕುರಿತು, ಕೊಂಚ ಕಟುವಾಗಿಯೇ ಪ್ರತಿಕ್ರಿಯಿಸಿದ್ದಾರೆ. ಅವರ ಪ್ರಕಾರ, ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಬಜೆಟ್ ನಲ್ಲಿ ರೈತನ ಉಲ್ಲೇಖವಿಲ್ಲ. ರೈತ ಈ ದೇಶದ ಭವಿಷ್ಯದ ಭಾಗವಾಗಿಲ್ಲ. ರೈತನಿಗಾಗಿ ಒಂದು ಯೋಜನೆಯೂ ಇಲ್ಲ. ಆನೆ-ಸಿಂಹಗಳಿಗೆ ಯೋಜನೆಗಳಿವೆ. ರೈತನ ಉಲ್ಲೇಖವಿದೆ, ಅದು ದಿವ್ಯಾಂಗರ ಜೊತೆ, ಮಾನಸಿಕ ಅಸ್ವಸ್ಥರ ಜೊತೆ ಇದೆ. ಅಸಹಾಯಕರ ಕೆಟಗರಿಯಲ್ಲಿ ಈಗ ರೈತನಿದ್ದಾನೆ ಎಂದು ಕೊಂಚ ಖಾರವಾಗಿಯೇ ಮಾತನಾಡಿದ್ದಾರೆ.

ಮುಂದುವರೆದು, ಒಂದು ವೇಳೆ ನೀವು ರೈತರಾಗಿದ್ದು ಏನಾದರೂ ಬೆಳೆಯಬೇಕೆಂದು ಬಯಸಿದರೆ, ನಿಮಗೆ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕೊಟ್ಟುಬಿಡುತ್ತೇವೆ. ನೀವು ಬಾದಾಮಿ, ಗೋಡಂಬಿ, ಕೋಕೋ ಬೆಳೆಯಿರಿ. ಒಂದು ವೇಳೆ ಬೆಳೆಯಲು ಸಾಧ್ಯವಾಗದಿದ್ದರೆ ಹಾಳಾಗಿ ಹೋಗಿ. ಇದು ನಮ್ಮ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಜಿ ಅವರ ಸಂದೇಶ ಎಂದು ವ್ಯಂಗ್ಯವಾಡಿದ್ದಾರೆ.

ಈ ಬಾರಿಯ ಬಜೆಟ್ ಗ್ರಾಮ, ರೈತ ಮತ್ತು ಕೃಷಿ ಈಗ ಅಸ್ತಿತ್ವದಲ್ಲೇ ಇಲ್ಲ ಎಂಬುದನ್ನು ಹೇಳುತ್ತಿದೆ. ಹಿಂದೆಯೂ ಆಳುವವರ ಮನಸ್ಸಿ ನಲ್ಲಿ ರೈತರಿರಲಿಲ್ಲ, ಕನಿಷ್ಠ ಪ್ರದರ್ಶನಕ್ಕಾಗಿಯಾದರೂ ಯೋಜನೆಗಳನ್ನು ಘೋಷಿಸಲಾಗುತ್ತಿತ್ತು. ಹಳ್ಳಿಗಳು, ಕೃಷಿ ಕಾರ್ಮಿಕರು ಮತ್ತು ಕೃಷಿಕರ ಬಗ್ಗೆ ಏನನ್ನಾದರೂ ಮಾತನಾಡಬೇಕಾದ ಅನಿವಾರ್ಯತೆ ಇತ್ತು. ಆದರೆ ಈ ಬಾರಿ ಅದನ್ನೂ ಕೊನೆಗೊಳಿಸಲಾಗಿದೆ ಎಂದು ಕೊಂಚ ಖೇದದಿಂದಲೇ ನುಡಿದಿದ್ದಾರೆ.

ಅಂದರೆ, ಆಳುವವರ ಹೃದಯದಲ್ಲಿ ಈಗ ರೈತ ಇಲ್ಲ. ನೆಪಕ್ಕಾದರೂ ನಾಲಗೆಯ ಮೇಲೆ ರೈತ ಬಂದುಹೋಗುತ್ತಿಲ್ಲ. ಅದು ಈ ಬಾರಿಯ ಬಜೆಟ್‌ನಲ್ಲಿ ಎದ್ದುಕಾಣುತ್ತಿದೆ. ಈಗಾಗಲೇ ಮೂರು ಕರಾಳ ಕೃಷಿ ಕಾಯ್ದೆಗಳನ್ನು ಜಾರಿಗೆ ತಂದು ರೈತರ ಕತೆ ಮುಗಿಸಲು ಮೋಶಾ ಮುಂದಾಗಿದ್ದರು. ಭಾರೀ ಪ್ರತಿರೋಧದಿಂದಾಗಿ ಕಾಯ್ದೆಗಳನ್ನು ಹಿಂಪಡೆದಿದ್ದರು. ಆ ಅವಮಾನದ ಸೇಡನ್ನು ಈಗ ಬಜೆಟ್ ಮೂಲಕ ತೀರಿಸಿಕೊಂಡಿದ್ದಾರೆ. ರೈತನ ಬೆನ್ನೆಲುಬನ್ನೇ ಮುರಿಯುತ್ತಿದ್ದಾರೆ ಎಂಬುದು ರೈತ ಸಮುದಾಯದ ಅನಿಸಿಕೆಯಾಗಿದೆ. ಅದು ಭವಿಷ್ಯದಲ್ಲಿ ಚಾಲ್ತಿಗೆ ಬಂದರೂ, ಆಶ್ಚರ್ಯವಿಲ್ಲ.

ಕೇಂದ್ರ ಬಜೆಟ್ ಭರವಸೆಗಳ ಬರಿ ಸದ್ದು; 'ಕಾಯಕ' ಮತ್ತು 'ದಾಸೋಹ' ತತ್ವಗಳ ಅಡಿಯಲ್ಲಿ ಒಂದು ವಿಶ್ಲೇಷಣೆ

ಸರ್ಕಾರ ಮತ್ತು ಸಚಿವಾಲಯದ ಆಡಳಿತ ಮತ್ತು ಅಧಿಕಾರಿ ವರ್ಗ ತಮ್ಮ ತಮ್ಮ ಹವಾನಿಯಂತ್ರಿತ ಕೊಠಡಿಗಳಿಂದ ಹೊರಬಂದು, ಭಾರತದ ಅತ್ಯಂತ ಹಿಂದುಳಿದ ಜಿಲ್ಲೆಗಳಾದ ಹರಿಯಾಣದ ನುಹ್, ಛತ್ತೀಸ್‌ಗಢದ ಸುಕ್ಮಾ ಅಥವಾ ಉತ್ತರ ಪ್ರದೇಶದ ಬಹ್ರೈಚ್‌ನಂತಹ ಪ್ರದೇಶಗಳ ಸ್ಥಿತಿಯನ್ನು ನೋಡಿದರೆ, ಈ ಬಜೆಟ್‌ನ ಅಂಕಿ-ಅಂಶಗಳು, ಒಂದು ಯಾವುದೋ ತಿಳಿಯಲಾರದ ಭಾಷೆಯಂತೆ ಭಾಸವಾಗುತ್ತವೆ.

ಬಸವಾದಿ ಶರಣರ ಕಲ್ಯಾಣ ಕ್ರಾಂತಿ ಬರಿ ಆಧ್ಯಾತ್ಮಿಕ, ಧಾರ್ಮಿಕ ಚಿಂತನೆಯ ವಿಷಯವಾಗದೆ, ಕಲ್ಯಾಣ ರಾಜ್ಯ ( )ದ ಕಲ್ಪನೆ ಕಂಡವರು; ಅನುಭವ ಮಂಟಪದಲ್ಲಿ ಸಂವಾದ ನಡೆಸಿ, ಅಂತಹ ಒಂದು ವಚನ ನಿಮ್ಮ ಓದಿಗಾಗಿ ಮತ್ತು ಈ ವಿಶ್ಲೇಷಣೆಯ ಬರಹದ ಅಂತಃಸತ್ವಾಗಿ,

ಇಲ್ಲಿ ಸಂದರ್ಭಕ್ಕಾಗಿ, ಬಹಿರಂಗದ ಅಂದರೆ ಬಂಡವಾಳ ಕೇಂದ್ರಿತ ಮತ್ತು ಅಂತರಂಗದ ಅಂದರೆ ಸಬಲೀಕರಣ ಅಂತ ಓದಿಕೊಳ್ಳಿ ಅಂತ ಬರಹಗಾರನ ಆಶಯ.

ಈ ಹೊತ್ತು 2026-27ರ ಕೇಂದ್ರ ಬಜೆಟ್‌ನ ಅಬ್ಬರ ಮುಗಿದಿದೆ. ''ವಿಕಸಿತ ಭಾರತ'' ಮತ್ತು ಟ್ರಿಲಿಯನ್ ಡಾಲರ್ ಕನಸುಗಳ ಆಕರ್ಷಕ ಗ್ರಾಫಿಕ್ಸ್ ಮಾಧ್ಯಮಗಳಲ್ಲಿ ರಾರಾಜಿಸುತ್ತಿವೆ. ಆದರೆ ಸರ್ಕಾರ ಮತ್ತು ಸಚಿವಾಲಯದ ಆಡಳಿತ ಮತ್ತು ಅಧಿಕಾರಿ ವರ್ಗ ತಮ್ಮ ತಮ್ಮ ಹವಾನಿಯಂತ್ರಿತ ಕೊಠಡಿಗಳಿಂದ ಹೊರಬಂದು, ಭಾರತದ ಅತ್ಯಂತ ಹಿಂದುಳಿದ ಜಿಲ್ಲೆಗಳಾದ ಹರಿಯಾಣದ ನುಹ್, ಛತ್ತೀಸ್‌ಗಢದ ಸುಕ್ಮಾ ಅಥವಾ ಉತ್ತರ ಪ್ರದೇಶದ ಬಹ್ರೈಚ್‌ನಂತಹ ಪ್ರದೇಶಗಳ ಸ್ಥಿತಿಯನ್ನು ನೋಡಿದರೆ, ಈ ಬಜೆಟ್‌ನ ಅಂಕಿ-ಅಂಶಗಳು, ಒಂದು ಯಾವುದೋ ತಿಳಿಯಲಾರದ ಭಾಷೆಯಂತೆ ಭಾಸವಾಗುತ್ತವೆ.

ಭಾರತದ ಅತ್ಯಂತ ದುರ್ಬಲ ವರ್ಗದ ಮೇಲೆ ಈ ಬಜೆಟ್ ಬೀರುವ ಪ್ರಭಾವವನ್ನು ಅರ್ಥಮಾಡಿಕೊಳ್ಳಲು, ನಾವು ನಮ್ಮ ನೆಲದ ಶ್ರೇಷ್ಠ ತತ್ವಗಳಾದ ಕಾಯಕ (ದುಡಿಮೆಯೇ ದೈವ) ಮತ್ತು ದಾಸೋಹ (ಸಮಾಜದೊಂದಿಗೆ ಹಂಚಿಕೊಳ್ಳುವಿಕೆ) ಎಂಬ ಮಾಪನಗಳ ಮೂಲಕ ನೋಡಬೇಕಿದೆ.

ಕಾಯಕದ ದೃಷ್ಟಿಕೋನದಿಂದ: ಉದ್ಯೋಗವಿಲ್ಲದ ಬೆಳವಣಿಗೆಯಲ್ಲಿ ಘನತೆ ಎಲ್ಲಿದೆ? ಕಾಯಕ ತತ್ವವು ''ಕಾಯಕವೇ ಕೈಲಾಸ'' ಎಂದು ಕಲಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಉತ್ಪಾದನಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಬಲನಾಗಬೇಕು ಮತ್ತು ಆ ದುಡಿಮೆಗೆ ಗೌರವವಿರಬೇಕು ಎಂಬುದು ಇದರ ಆಶಯ. ಸರ್ಕಾರ 2026ರ ಬಜೆಟ್ ಮೂಲಸೌಕರ್ಯಕ್ಕಾಗಿ ₹12.2 ಲಕ್ಷ ಕೋಟಿ ಮೀಸಲಿಡುವ ಮೂಲಕ ಉತ್ಪಾದನೆಗೆ ಒತ್ತು ನೀಡಿದ್ದೇವೆ ಎಂದು ಬೆನ್ನು ತಟ್ಟಿಕೊಳ್ಳುತ್ತಿದೆ. ಆದರೆ, ಕುಡಿಯುವ ನೀರು ಮತ್ತು ಸ್ಥಳೀಯ ಸಣ್ಣ ಕೈಗಾರಿಕೆಗಳಿಲ್ಲದ ನುಹ್‌ನಂತಹ ಜಿಲ್ಲೆಯ ಯುವಕನಿಗೆ ಈ ಬೃಹತ್ ಯೋಜನೆಗಳು ಒಂದು ಬಿಸಿಲು ಕುದುರೆಯಂತೆ ಕಾಣುತ್ತವೆ.

ಹೊಂದಾಣಿಕೆಯ ಕೊರತೆ: ಬಜೆಟ್ ಸೆಮಿಕಂಡಕ್ಟರ್ ಮಿಷನ್ ಮತ್ತು ಕೈಗಾರಿಕಾ ಕಾರಿಡಾರ್‌ಗಳಿಗೆ ಕೋಟ್ಯಂತರ ರೂಪಾಯಿ ಸುರಿಯುತ್ತಿದೆ. ಆದರೆ ಹಿಂದುಳಿದ ಜಿಲ್ಲೆಗಳಿಗೆ ಅಗತ್ಯವಿರುವ ಶ್ರಮ-ಆಧಾರಿತ ಕಾಯಕಕ್ಕೆ (-) ಇಲ್ಲಿ ಹೆಚ್ಚಿನ ಮಾನ್ಯತೆ ಇಲ್ಲ. ಹಾಗೆಯೇ, ಮನರೇಗಾದ ಹೆಸರು



ಬದಲಾಯಿಸುವದರೊಂದಿಗೆ, ಆ ಯೋಜನೆಯ ಆಶಯವನ್ನು ಮರೆಮಾಚಿದರು.

ದುಡಿಮೆಯ ಕೊರತೆ: ಸುಕ್ಮಾದ ಯುವಕನಿಗೆ ಸ್ಥಳೀಯವಾಗಿ ಕೆಲಸ ಸಿಗದಿದ್ದರೆ, ಅವನ ಪಾಲಿಗೆ ಕಾಯಕ ಎಂಬುದು ದೈವತ್ವದ ಬದಲು ನಿರುದ್ಯೋಗದ ನಿರಾಸೆಯಾಗಿ ಬದಲಾಗುತ್ತದೆ.

ಅಭಿಪ್ರಾಯ: ಬಜೆಟ್ ಕೇವಲ ತಾಂತ್ರಿಕ ಮತ್ತು ಬಂಡವಾಳ-ಆಧಾರಿತ ವಲಯಗಳಿಗೆ ಆದ್ಯತೆ ನೀಡುವ ಮೂಲಕ ''ಕಾಯಕದ ಕಂದಕ ( )'' ವನ್ನು ಸೃಷ್ಟಿಸಿದೆ. ಉತ್ಪಾದನಾ ಸಾಧನಗಳು ಕೇವಲ ನಗರದ ಗಣ್ಯರ ಪಾಲಾಗುತ್ತಿವೆ.

ದಾಸೋಹದ ದೃಷ್ಟಿಕೋನದಿಂದ: ಕೇವಲ ಬದುಕುಳಿಯುವುದು ಸಬಲೀಕರಣವಲ್ಲ. ದಾಸೋಹ ಎಂದರೆ ಕೇವಲ ದಾನವಲ್ಲ; ಅದು ಸಮಾಜದ ಸಂಪತ್ತನ್ನು ಸಮಾನವಾಗಿ ಹಂಚಿ, ಪ್ರತಿಯೊಬ್ಬರಿಗೂ ಗೌರವಾನ್ವಿತ ಜೀವನವನ್ನು ಒದಗಿಸುವ ನೈತಿಕ ಜವಾಬ್ದಾರಿ.

ಸರ್ಕಾರವು ಉಚಿತ ಪಡಿತರ ಯೋಜನೆ ಮತ್ತು 17 ಜೀವ ಉಳಿಸುವ ಔಷಧಗಳ ಮೇಲಿನ ಸುಂಕ ರದ್ದತಿಯನ್ನು ದಾಸೋಹ ಎಂದು ಬಿಂಬಿಸುತ್ತಿದೆ. ಇವು ಅಗತ್ಯವಾದ ಸುರಕ್ಷತಾ ಕ್ರಮಗಳಾದರೂ, ಇವು ''ಬದುಕುಳಿಯುವ ದಾಸೋಹ'' ಮಾತ್ರ, ಇವು ''ಬಾಳನ್ನು ಬೆಳಗುವ ದಾಸೋಹ'' ಅಲ್ಲ.

ಆರೋಗ್ಯ ಮತ್ತು ಶಿಕ್ಷಣದ ಕೊರತೆ: ಬಹ್ರೈಚ್‌ನಂತಹ ಜಿಲ್ಲೆಗೆ ನಿಜವಾದ ದಾಸೋಹ ಎಂದರೆ ಗುಣಮಟ್ಟದ ಶಾಲೆಗಳು ಮತ್ತು 24 ಗಂಟೆ ಕೆಲಸ ಮಾಡುವ ಆಸ್ಪತ್ರೆಗಳು. ಆದರೆ ಬಜೆಟ್ ''ಡಿಜಿಟಲ್ ಹೆಲ್ತ್'' ಮತ್ತು ಶಿಕ್ಷಣದ ಬಗ್ಗೆ ಮಾತನಾಡುತ್ತದೆಯೇ ಹೊರತು, ಹಳ್ಳಿಯ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ಶಾಲೆಗಳಲ್ಲಿ ಶಿಕ್ಷಕರ ಕೊರತೆಯನ್ನು ನೀಗಿಸುವ ಭರವಸೆ ನೀಡುತ್ತಿಲ್ಲ.

ತೆರಿಗೆ ಮತ್ತು ಪುನರ್ ಹಂಚಿಕೆ: ಹೊಸ ಆದಾಯ ತೆರಿಗೆ ಕಾಯ್ದೆಯು ಮಧ್ಯಮ ವರ್ಗಕ್ಕೆ ಸಮಾಧಾನ ನೀಡಬಹುದು. ಆದರೆ ದೇಶದ ಶೇ. 1ರಷ್ಟು ಶ್ರೀಮಂತರ ಬಳಿ ಇರುವ ಅತೀ ಹೆಚ್ಚಿನ ಸಂಪತ್ತನ್ನು ಕೆಳಮಟ್ಟದ ಶೇ. 50ರಷ್ಟು ಜನರಿಗೆ ಹಂಚುವ ಯಾವುದೇ ದಿಟ್ಟ ಕ್ರಮ ಇಲ್ಲಿ ಕಾಣುತ್ತಿಲ್ಲ.

ಅಭಿಪ್ರಾಯ: ಜನರಿಗೆ ಉಚಿತ ಧಾನ್ಯ ನೀಡುವುದು ಅವರನ್ನು ಬದುಕಿಸಿಡಬಹುದು, ಆದರೆ ಅವರಿಗೆ ಗುಣಮಟ್ಟದ ಸಾರ್ವಜನಿಕ ಸೇವೆಗಳನ್ನು (ಶಿಕ್ಷಣ, ಆರೋಗ್ಯ) ನೀಡುವುದು ಅವರನ್ನು ಸಮಾನರನ್ನಾಗಿ ಮಾಡುತ್ತದೆ. ಬಜೆಟ್ ಸಬಲೀಕರಣಕ್ಕಿಂತ ಹೆಚ್ಚಾಗಿ ಅವಲಂಬನೆಯನ್ನು ಆರಿಸಿಕೊಂಡಿದೆ.

ಸಾರಾಂಶ: ಬಸವಾದಿ ಶರಣರ ಕನಸಿನ ಸಮಾಜದಲ್ಲಿ ದುಡಿಯುವವನಿಗೆ ಗೌರವವಿರಬೇಕು ಮತ್ತು ಅಗತ್ಯವಿರುವವರಿಗೆ ಸಬಲೀಕರಣದ ಹಸ್ತ ಸಿಗಬೇಕು. ಹಿಂದುಳಿದ ಜಿಲ್ಲೆಗಳ ಯುವಕರ ಕಾಯಕಕ್ಕೆ ಬಲ ತುಂಬುವವರೆಗೆ ಮತ್ತು ಶಿಕ್ಷಣದ ದಾಸೋಹವನ್ನು ಸರಿಯಾಗಿ ಮಾಡುವವರೆಗೆ, ನಾವು ನಿಜವಾದ ''ವಿಕಸಿತ ಭಾರತ''ವನ್ನು ನಿರ್ಮಿಸಲು ಸಾಧ್ಯವಿಲ್ಲ.

ಘೋಷಿತ 5,000 ಕಿಲೋಮೀಟರ್ ವೇಗದ ರೈಲು ಮಾರ್ಗವನ್ನು ನಿರ್ಮಿಸಿ, ಹಿಂದುಳಿದ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಒಬ್ಬ ನರ್ಸ್ ಇಲ್ಲದಂತೆ ಮಾಡುವುದು ಯಾವ ನ್ಯಾಯ? ಇದು ಕೇವಲ ಅಂಕಿ-ಅಂಶಗಳ ಬಜೆಟ್ ಆಗಿದೆಯೇ ಹೊರತು ಜನರ ಬಜೆಟ್ ಅಲ್ಲ. ಕಾಯಕ ಮತ್ತು ದಾಸೋಹ, ಎಂಬ ಎರಡು ತತ್ವ/ಮೌಲ್ಯ ಮಾಪಕವಾಗಿ ಈ ಆಯ/ವ್ಯಯ ಪಾತ್ರ ಮೇಲ್ನೋಟಕ್ಕೆ ಮತ್ತು ಕಣ್ಣಿಗೆ ರಾಚುವ ಹಾಗೆ ಕಂಡಿದ್ದು, ಮಾನವ ಅಭಿವೃದ್ಧಿ ಕೊರತೆಯ ಮೇಲೆ ನಿರ್ಲಕ್ಷ್ಯ.

ಕೇರಳದ ಎಂಟು ಸಾಧಕರಿಗೆ ಪದ್ಮ ಪ್ರಶಸ್ತಿ ಎಂಬ ಮೋದಿ ತಂತ್ರ: ಮತ ಬ್ಯಾಂಕ್‌ಗಾಗಿ ಬಿಜೆಪಿ ಅಸ್ತ್ರ!

ಯುಡಿಎಫ್ ಕ್ರೈಸ್ತ ಮತ್ತು ಮುಸ್ಲಿಮರ ಮತಗಳನ್ನು ಸೆಳೆಯುವ ನಿಟ್ಟಿನಲ್ಲಿ ಪ್ರಚಾರದ ಸಿದ್ಧತೆಗಳನ್ನು ಮಾಡಿಕೊಂಡಿದೆ. ಹೀಗಿರುವಾಗ ಎಲ್‌ಡಿಎಫ್‌ನ ನಾಯರ್ ಮತದಾರರನ್ನು ತನ್ನತ್ತ ಸೆಳೆಯುವ ಯೋಜನೆ ಬಿಜೆಪಿಯದ್ದು. ಇದೀಗ ಮೋದಿಯ ಪದ್ಮ ಪ್ರಶಸ್ತಿ ತಂತ್ರವೇ ಮತ ಬ್ಯಾಂಕ್‌ನ ಅಸ್ತ್ರವಾಗಿದೆ.

ಚರ್ಚೆಗೆ ಒಳಗಾಗಿರುವುದು. ಈ ಹಿಂದೆ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ, ಹಿರಿಯ ಕಮ್ಯೂನಿಸ್ಟ್ ನಾಯಕ ಬುದ್ಧದೇವ್

ಆರ್‌ಎಸ್‌ಎಸ್ ನಾಯಕ ಪಿ. ನಾರಾಯಣನ್ ಅವರಿಗೂ ಗೌರವ ನೀಡಿದೆ.



ಮತದಾರರನ್ನು ಆಕರ್ಷಿಸುವ ತಂತ್ರವೇ?

ಕೇರಳದಲ್ಲಿ ಮತದಾರರ ಲೆಕ್ಕಾಚಾರವೇ ಬೇರೆ. ಪ್ರತಿ ಬಾರಿ ಚುನಾವಣೆ ನಡೆಯುವಾಗಲೂ ಆಡಳಿತರೂಢ ಪಕ್ಷದಿಂದ ವಿರೋಧ ಪಕ್ಷದ ಕೈಗೆ ಅಧಿಕಾರ ನೀಡುವವರು ಕೇರಳಿಗರು.

ಈ ಬಾರಿ ಪದ್ಮ ಪ್ರಶಸ್ತಿ ಬರೀ ಸಾಧಕರಿಗೆ ನೀಡುವ ಗೌರವವಾಗಿ ಉಳಿದಿಲ್ಲ. ಕೇಂದ್ರದ ಪ್ರಧಾನಿ ನರೇಂದ್ರ ಮೋದಿ ಸರ್ಕಾರವು ಈ ಪ್ರಶಸ್ತಿಯಲ್ಲೂ ರಾಜಕೀಯದಾಟ ಶುರು ಮಾಡಿದೆ. ಕಳೆದ ಬಜೆಟ್ ಸಂದರ್ಭದಲ್ಲಿ ತಮ್ಮ ಮಿತ್ರಪಕ್ಷಗಳು ಇರುವ ರಾಜ್ಯಗಳು ಮತ್ತು ಚುನಾವಣೆ ಎದುರಿಸಲಿರುವ ರಾಜ್ಯಗಳೇ ಹೇಗೆ ಗುರಿಯಾಗಿದ್ದವೋ, ಹಾಗೆಯೇ ಇದೀಗ ಪದ್ಮ ಪ್ರಶಸ್ತಿ. ಯಾವ ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆಯೋ ಆ ರಾಜ್ಯಗಳ ಸಾಧಕರು ಮೋದಿ ಸರ್ಕಾರಕ್ಕೆ ಈ ವರ್ಷ ಕಾಣಿಸಿಕೊಂಡಿದ್ದಾರೆ. ಮೋದಿಯ ಪದ್ಮ ಪ್ರಶಸ್ತಿ ತಂತ್ರವೇ ಮತ ಬ್ಯಾಂಕ್‌ನ ಅಸ್ತ್ರವಾಗಿದೆ.

ಮೋದಿ ಸರ್ಕಾರ ಘೋಷಿಸಿದ ಪದ್ಮ ಪ್ರಶಸ್ತಿಯ ಪಟ್ಟಿಯಲ್ಲಿ ಕೇರಳದ ಎಂಟು ಮಂದಿ ಹೆಸರು ಸೇರಿಕೊಂಡಿದೆ. ಇದರಲ್ಲಿ ಮೂರು ಪದ್ಮವಿಭೂಷಣ ಪ್ರಶಸ್ತಿಗಳೂ ಸೇರಿವೆ. ಮಾಜಿ ಮುಖ್ಯಮಂತ್ರಿ ವಿ.ಎಸ್. ಅಚ್ಯುತಾನಂದನ್ (ಮರಣೋತ್ತರ), ಬರಹಗಾರ/ಪತ್ರಕರ್ತ ಪಿ. ನಾರಾಯಣನ್ ಮತ್ತು ಮಾಜಿ ಸುಪ್ರೀಂ ಕೋರ್ಟ್ ನ್ಯಾಯಾಧೀಶ ಕೆ.ಟಿ. ಥಾಮಸ್ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಲಾಗಿದೆ. ಎಡಪಂಥೀಯ ಬೆಂಬಲಿಗ ನಟ ಮಮ್ಮುಟ್ಟಿ ಮತ್ತು ಎಸ್‌ಎನ್‌ಡಿಪಿ ಯೋಗಂ ನಾಯಕ ವೆಲ್ಲಪ್ಪಳ್ಳಿ ನಟೇಶನ್ ಅವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಲಾಗಿದೆ. ನೃತ್ಯ ಪ್ರತಿಭಾನ್ವಿತ ಕಲಾಮಂಡಲಂ ವಿಮಲಾ ಮೆನನ್, ಅರಣ್ಯ ಸಂರಕ್ಷಣಾವಾದಿ ಕೊಲ್ಲಕಯಿಲ್ ದೇವಕಿ ಅಮ್ಮ ಮತ್ತು ಇಸ್ರೋ ವಿಜ್ಞಾನಿ ಎ.ಇ. ಮುತ್ತುನಾಯಗಮ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಲಾಗಿದೆ.

ಪ್ರಮುಖವಾಗಿ ತಮ್ಮ ರಾಜಕೀಯ ವಿರೋಧಿಗಳು, ಎಡಪಂಥೀಯ ನಾಯಕ, ಸಂಘ ಪರಿವಾರದ ಕಟು ಟೀಕಾಕಾರ ಅಚ್ಯುತಾನಂದನ್ ಅವರಿಗೆ ಈ ಪ್ರಶಸ್ತಿ ನೀಡಿರುವುದು ಹೆಚ್ಚು

ಭಟ್ಟಾಚಾರ್ಯ 2022ರಲ್ಲಿ ಪ್ರಶಸ್ತಿಯನ್ನು ನಿರಾಕರಿಸಿದ್ದರು. ಆದರೆ ಕೇರಳ ಸಿಪಿಐಎಂ ಮತ್ತು ಅಚ್ಯುತಾನಂದನ್ ಕುಟುಂಬವು ಪ್ರಶಸ್ತಿಯನ್ನು ಸ್ವಾಗತಿಸಿದೆ. ಇದರಿಂದಾಗಿ ಹೆಚ್ಚು ಚರ್ಚೆ ನಡೆಯುತ್ತಿದೆ. ಇವೆಲ್ಲವುದರ ನಡುವೆ ಬಿಜೆಪಿ ಸರ್ಕಾರ ಈ ಪ್ರಶಸ್ತಿ ನೀಡುವುದರ ಹಿಂದೆ 25%ಕ್ಕಿಂತ ಹೆಚ್ಚು ಮತ ಬ್ಯಾಂಕ್ ಅನ್ನು ದೋಚುವ ತಂತ್ರವಿದೆ ಎಂಬುದು ಸ್ಪಷ್ಟ.

ಬಿಜೆಪಿ ಜಾತಿ ಲೆಕ್ಕಾಚಾರ

ಪದ್ಮ ಪ್ರಶಸ್ತಿಗೆ ಮೋದಿ ಸರ್ಕಾರ ಕೇರಳದಲ್ಲಿ ಮಾಡಿರುವ ಆಯ್ಕೆಗಳು ಜಾತಿ ಲೆಕ್ಕಾಚಾರ ಹೊಂದಿದೆ. ಕೇರಳದ ಅತಿದೊಡ್ಡ ಒಬಿಸಿ ಗುಂಪು ಮತ್ತು ಸಾಂಪ್ರದಾಯಿಕ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ಭದ್ರಕೋಟೆಯಾದ ಈಳವ ಸಮುದಾಯವನ್ನು ಮೋದಿ ಸರ್ಕಾರ ಪದ್ಮ ಪ್ರಶಸ್ತಿ ಮೂಲಕ ಸೆಳೆಯುವ ಗುರಿ ಹೊಂದಿದೆ. ಅಚ್ಯುತಾನಂದನ್ ಅವರು ಈಳವ ಸಮುದಾಯಕ್ಕೆ ಸೇರಿರುವ ಕಾರಣ ಈ ಸಮುದಾಯದ ಬೆಂಬಲಗಿಟ್ಟಿಸಿಕೊಳ್ಳುವ ಉದ್ದೇಶದೊಂದಿಗೆ ಅವರಿಗೆ ಪದ್ಮ ಪ್ರಶಸ್ತಿ ನೀಡಲಾಗಿದೆ. ಅದೇ ರೀತಿ ಬಿಜೆಪಿ ಮಿತ್ರಪಕ್ಷವಾದ ಭಾರತ ಧರ್ಮ ಜನಸೇನಾ () ನಾಯಕ ವೆಲ್ಲಪ್ಪಳ್ಳಿ ನಟೇಶನ್ ಅವರಿಗೆ ಪ್ರಶಸ್ತಿ ನೀಡಿರುವುದರಲ್ಲಿ ಆಶ್ಚರ್ಯವೇನಿಲ್ಲ.

ವಿರೋಧ ಕುಗ್ಗಿಸಲು ವಿರೋಧಿಗಳಿಗೆ ಸನ್ಮಾನ!

ತಮ್ಮ ಸೈದ್ಧಾಂತಿಕ ನಿಲುವಿಗೆ ವಿರೋಧವನ್ನು ಕಡಿಮೆ ಮಾಡುವ ಉದ್ದೇಶದಿಂದಲೇ ವಿರೋಧಿಗಳನ್ನು ಸನ್ಮಾನಿಸುವುದು ಹೊಸತೇನಲ್ಲ. ಹಾಗೆಯೇ ಬರೀ ತಮ್ಮವರಿಗೆ ದೇಶದ ಅತ್ಯುನ್ನತ ಪ್ರಶಸ್ತಿಗಳನ್ನು ನೀಡಿದರೆ ವಿಪಕ್ಷಗಳ ವಾಗ್ದಾಳಿಗೆ ಗುರಿಯಾಗುವ ಸಾಧ್ಯತೆಯೂ ಇರುತ್ತದೆ. ಇದೇ ಕಾರಣದಿಂದಾಗಿ ಆರ್‌ಎಸ್‌ಎಸ್ ಬೆಂಬಲಿಗರ ಜತೆಗೆ ವಿರೋಧಿಗಳಿಗೂ ಪ್ರಶಸ್ತಿ ನೀಡಿದೆ. ಅಚ್ಯುತಾನಂದನ್ ತಮ್ಮ ಜೀವನದುದ್ದಕ್ಕೂ ಬಿಜೆಪಿ/ಆರ್‌ಎಸ್‌ಎಸ್ ಅನ್ನು ಕಟುವಾಗಿ ಟೀಕಿಸುತ್ತಿದ್ದವರು. ಆದರೆ ಇದೀಗ ಜಾತಿ ಲೆಕ್ಕಾಚಾರದ ಜತೆಗೆ ವಿರೋಧ ಕುಗ್ಗಿಸುವ ತಂತ್ರವನ್ನು ಬಿಜೆಪಿ ಆಯ್ದುಕೊಂಡಿದೆ. ಇನ್ನೊಂದೆಡೆ

ಕಳೆದ ಬಾರಿ ಮಾತ್ರ ಸತತವಾಗಿ ಎರಡನೇ ಬಾರಿಗೆ ಎಲ್‌ಡಿಎಫ್ ಅನ್ನು ಕೇರಳದ ಜನರು ಗೆಲ್ಲಿಸಿದ್ದಾರೆ. ಈ ಮೂಲಕ ಎಲ್‌ಡಿಎಫ್ 40 ವರ್ಷಗಳ ದಾಖಲೆಯನ್ನು ಮುರಿದಿದೆ. ಇದೀಗ ಮೂರನೇ ಬಾರಿಗೆ ಎಲ್‌ಡಿಎಫ್ ಗೆಲ್ಲಲಿದೆಯೇ ಎಂಬ ಕುತೂಹಲ ಎಲ್ಲರದ್ದು. ಎಲ್‌ಡಿಎಫ್‌ನ ಜನಪರ ಯೋಜನೆಗಳು ಜನರನ್ನು ಆಕರ್ಷಿಸಿದ್ದರೂ ಕೇರಳ ಸಿಎಂ ಪಿಣರಾಯಿ ವಿಜಯನ್ ಅವರು ಅಚ್ಯುತಾನಂದನ್ ಅವರನ್ನು ಕಡೆಗಣಿಸುತ್ತಿದ್ದಾರೆ ಎಂಬ ಭಾವನೆಯನ್ನು ಹಲವು ಯುವಕರು ಹೊಂದಿದ್ದಾರೆ. ಈ ಯುವಕರನ್ನು ತನ್ನತ್ತ ಸೆಳೆಯುವ ತಂತ್ರ ಇದೀಗ ಬಿಜೆಪಿಯದ್ದು.

ಯುಡಿಎಫ್ ಕ್ರೈಸ್ತ ಮತ್ತು ಮುಸ್ಲಿಮರ ಮತಗಳನ್ನು ಸೆಳೆಯುವ ನಿಟ್ಟಿನಲ್ಲಿ ಪ್ರಚಾರದ ಸಿದ್ಧತೆಗಳನ್ನು ಮಾಡಿಕೊಂಡಿದೆ. ಹೀಗಿರುವಾಗ ಎಲ್‌ಡಿಎಫ್‌ನ ನಾಯರ್ ಮತದಾರರನ್ನು ತನ್ನತ್ತ ಸೆಳೆಯುವ ಯೋಜನೆ ಬಿಜೆಪಿಯದ್ದು. ಅದಕ್ಕೆ ಈ ಹಿಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿನ ಗೆಲುವೂ ಬಲ ನೀಡಿದಂತಿದೆ. ಇದರೊಂದಿಗೆ ಬಿಜೆಪಿ ತನ್ನ ಎಂದಿನ ಕೋಮುದ್ವೇಷದ ಹೇಳಿಕೆಗಳನ್ನು ಅಸ್ತ್ರವನ್ನಾಗಿಯೇ ಇರಿಸಿಕೊಂಡಿದೆ. ಅದಕ್ಕಾಗಿಯೇ ಮುಸ್ಲಿಂ ವಿರೋಧಿ ಹೇಳಿಕೆಗಳನ್ನು ನೀಡುತ್ತಾ ಬಂದಿರುವ ವೆಲ್ಲಪ್ಪಳ್ಳಿ ನಟೇಶನ್ ಅವರನ್ನು ಸಾಧಕರಾಗಿ ಗುರುತಿಸಿದೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR